सत्यमेव जयते

## ರಾಷ್ಟ್ರೀಯ ಶಿಕ್ಷಣ ನೀತಿ, 2019- ಕರಡು

# ಸಾರಾಂಶ

## ಕರಡು ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿ

**ಅಧ್ಯಕ್ಷರು**

ಕೆ. ಕಸ್ತೂರಿರಂಗನ್, ಮಾಜಿ ಅಧ್ಯಕ್ಷರು, ಇಸ್ರೋ, ಬೆಂಗಳೂರು.

**ಸದಸ್ಯರುಗಳು**

**ಎ.** ವಸುಧಾ ಕಾಮತ್, ಮಾಜಿ ಉಪಕುಲಪತಿಗಳು, ಎಸ್.ಎನ್.ಡಿ.ಟಿ. ಮಹಿಳಾ ವಿಶ್ವವಿದ್ಯಾಲಯ, ಮುಂಬೈ.

**ಬಿ.** ಮಂಜುಳ್ ಭಾರ್ಗವ, ಆರ್. ಬ್ರ್ಯಾಂಡನ್ ಫ್ರಾಡ್ ಪ್ರೊಫೆಸರ್, ಗಣಿತಶಾಸ್ತ್ರ, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ, ಯು.ಎಸ್.ಎ.

**ಸಿ.** ರಾಮ ಶಂಕರ ಕುರೀಲ್, ಮಾಜಿ ಸಂಸ್ಥಾಪಕ ಉಪಕುಲಪತಿಗಳು, ಬಾಬಾ ಸಾಹೇಬ್ ಅಂಬೇಡ್ಕರ್ ಸಮಾಜ ವಿಜ್ಞಾನಗಳ ವಿಶ್ವವಿದ್ಯಾಲಯ, ಮಧ್ಯಪ್ರದೇಶ.

**ಡಿ.** ಟಿ.ವಿ. ಕಟ್ಟೀಮನಿ, ಉಪಕುಲಪತಿಗಳು, ಇಂದಿರಾ ಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯ, ಅಮರಕಂಟಕ, ಮಧ್ಯಪ್ರದೇಶ.

**ಇ.** ಕೃಷ್ಣ ಮೋಹನ್ ತ್ರಿಪಾಠಿ, ನಿರ್ದೇಶಕರು, ಶಿಕ್ಷಣ (ಪ್ರೌಢ ಶಿಕ್ಷಣ), ಮತ್ತು ಮಾಜಿ ಅಧ್ಯಕ್ಷರು, ಉತ್ತರಪ್ರದೇಶ ಪ್ರೌಢಶಾಲಾ ಮತ್ತು ಇಂಟರ್ಮೀಡಿಯೇಟ್ ಪರೀಕ್ಷಾ ಮಂಡಳಿ. ಉತ್ತರಪ್ರದೇಶ.

**ಎಫ್.** ಮಹಜರ್ ಅಸೀಫ್, ಪರ್ಶಿಯನ್ ಮತ್ತು ಮಧ್ಯ ಏಶಿಯಾಗಳ ಅಧ್ಯಯನ ಕೇಂದ್ರ, ಸ್ಕೂಲ್ ಆಫ್ ಲ್ಯಾಂಗ್ವೇಜಸ್, ಲಿಟರೇಚರ್ ಅಂಡ್ ಕಲ್ಚರಲ್ ಸ್ಟಡೀಸ್, ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ.

**ಜಿ.** ಎಂ.ಕೆ. ಶ್ರೀಧರ್, ಮಾಜಿ ಕಾರ್ಯದರ್ಶಿ ಸದಸ್ಯ, ಕರ್ನಾಟಕ ಜ್ಞಾನ ಆಯೋಗ, ಬೆಂಗಳೂರು, ಕರ್ನಾಟಕ.

**ಕಾರ್ಯದರ್ಶಿಗಳು**

**ಎಚ್.** ಶಕೀಲ ಟಿ. ಶಂಸು, ನಿಯೋಜಿತ ವಿಶೇಷ ಅಧಿಕಾರಿ (ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ) (ರಾಷ್ಟ್ರೀಯ ಶಿಕ್ಷಣ ನೀತಿ), ಉನ್ನತ ಶಿಕ್ಷಣ ಇಲಾಖೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ.

## ಕರಡು ನೀತಿ ರಚನಾ ಸಮಿತಿ

**ಎ.** ಮಂಜುಳ್ ಭಾರ್ಗವ, ಆರ್. ಬ್ರ್ಯಾಂಡನ್ ಫ್ರಾಡ್ ಪ್ರೊಫೆಸರ್, ಗಣಿತಶಾಸ್ತ್ರ, ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ, ಯು.ಎಸ್.ಎ.

**ಬಿ.** ಕೆ. ರಾಮಚಂದ್ರನ್, ಸಲಹೆಗಾರರು, ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್, ನವದೆಹಲಿ.

**ಸಿ.** ಅನುರಾಗ್ ಬೆಹರ್, ಕಾರ್ಯನಿರ್ವಾಹಕರು, ಅಜಿಮ್ ಪ್ರೇಮ್‌ಜಿ ಫೌಂಡೇಶನ್, ಮತ್ತು ಉಪಕುಲಪತಿಗಳು, ಅಜಿಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು.

**ಡಿ.** ಲೀನಾ ಚಂದ್ರನ್ ವಾಡಿಯಾ, ಅಬ್ಸರ್ವರ್ ರಿಸರ್ಚ್ ಫೌಂಡೇಶನ್, ಮುಂಬೈ.

# ಮುನ್ನೋಟ

**ರಾಷ್ಟ್ರೀಯ ಶಿಕ್ಷಣ ನೀತಿ, 2019 ಭಾರತ ಕೇಂದ್ರಿತ ಶಿಕ್ಷಣ ವ್ಯವಸ್ಥೆಯೊಂದಿಗೆ ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುತ್ತದೆ.**

# ನೀತಿಯ ಅವಲೋಕನ – ಮುಖ್ಯ ಅಂಶಗಳು

## I. ಶಾಲಾ ಶಿಕ್ಷಣ

**ಎ.** ಪ್ರಾರಂಭಿಕ ಬಾಲ್ಯ ಶಿಕ್ಷಣ: ಈ ನೀತಿಯು ಪ್ರಾರಂಭಿಕ ಬಾಲ್ಯ ಶಿಕ್ಷಣದ ಮಹತ್ವಕ್ಕೆ ಬಹಳ ಒತ್ತು ನೀಡುತ್ತದೆ ಮತ್ತು 3-6 ವರ್ಷಗಳ ವಯೋಮಾನದ ಎಲ್ಲಾ ಮಕ್ಕಳಿಗೆ 2025ರ ವೇಳೆಗೆ ಉತ್ತಮ ಗುಣ ಮಟ್ಟದ ಶಿಕ್ಷಣವನ್ನು ನೀಡುವ ಧ್ಯೇಯವನ್ನು ಹೊಂದಿದೆ. ಈ ದಿಕ್ಕಿನಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವ ಗುರಿಯನ್ನು ಹೊಂದಿದೆ.

**ಬಿ.** ಸಾಕ್ಷರತೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ಸುಭದ್ರ ಅಡಿಪಾಯ: 1 ರಿಂದ 5ನೇ ತರಗತಿಯವರೆಗಿನ ಮಕ್ಕಳಿಗೆ ಪ್ರಾರಂಭಿಕ ಮಟ್ಟದ ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳನ್ನು ಕಲಿಸುವ ಬಗ್ಗೆ ವಿಶೇಷ ಗಮನವನ್ನು ನೀಡಲಾಗುತ್ತದೆ. 2025ರ ವೇಳೆಗೆ 5ನೇ ತರಗತಿಯಲ್ಲಿ ಮತ್ತು ಅದಕ್ಕಿಂತ ಮೇಲಿನ ತರಗತಿಗಳಲ್ಲಿ ಓದುತ್ತಿರುವ ಪ್ರತಿ ವಿದ್ಯಾರ್ಥಿಯೂ ಕೂಡ ಪ್ರಾರಂಭಿಕ ಭಾಷಾ ಸಾಮರ್ಥ್ಯ ಮತ್ತು ಗಣಿತ ಕೌಶಲಗಳನ್ನು ಹೊಂದಿರುವಂತೆ ಮಾಡುವುದು ಈ ನೀತಿಯ ಧ್ಯೇಯವಾಗಿದೆ.

**ಸಿ.** ಪಠ್ಯಕ್ರಮ ಹಾಗೂ ಶಿಕ್ಷಣ ಕ್ರಮ: ಮಕ್ಕಳ ಮೆದುಳಿನ ಬೆಳವಣಿಗೆಗೆ ಹಾಗೂ ಕಲಿಕೆಗೆ ಸೂಕ್ತವಾದ ಶೈಕ್ಷಣಿಕ ಕ್ರಮ ಮತ್ತು ಪಠ್ಯಕ್ರಮವನ್ನು 5 + 3 + 3 + 4 ರ ಮಾದರಿಯಲ್ಲಿ ವಿನ್ಯಾಸಗೊಳಿಸುವುದು. ಭಾಷೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನಗಳು, ಕಲೆ ಮತ್ತು ಕ್ರೀಡೆಗಳಿಗೆ ಸಮಾನ ಒತ್ತು ನೀಡಲಾಗುವುದು. ಹಾಗೆಯೇ, ಶೈಕ್ಷಣಿಕ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಒಂದಾಗಿ ಬೆಸೆಯುವುದು ಈ ನೀತಿಯ ಗುರಿಯಾಗಿದೆ.

**ಡಿ.** ಸಾರ್ವತ್ರಿಕ ಲಭ್ಯತೆ: ಹಲವಾರು ಕ್ರಮಗಳ ಮುಖಾಂತರ 2030ರ ವೇಳೆಗೆ ನೂರಕ್ಕೆ ನೂರರಷ್ಟು ಶಾಲಾ ದಾಖಲಾತಿಯನ್ನು ಹೊಂದುವುದು ಈ ನೀತಿಯ ಉದ್ದೇಶವಾಗಿದೆ.

**ಇ.** ಸಮಾನ ಹಾಗೂ ಎಲ್ಲರನ್ನೂ ಒಳಗೊಂಡ ಶಿಕ್ಷಣ: ಯಾವುದೇ ಮಗವೂ ಕೂಡ ತನ್ನ ಹುಟ್ಟು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳ ಕಾರಣದಿಂದಾಗಿ ಕಲಿಕೆಯ ಅವಕಾಶದಿಂದ ವಂಚಿತವಾಗದಿರಲು ನೀತಿಯು ಅನೇಕ ಕ್ರಮಗಳನ್ನು ಸೂಚಿಸುತ್ತದೆ.

**ಎಫ್.** ಶಾಲಾ ಶಿಕ್ಷಕರನ್ನು ಒಂದು ಉತ್ತಮ ಹಾಗೂ ಸಂಪೂರ್ಣವಾಗಿ ಪಾರದರ್ಶಕ ಪ್ರಕ್ರಿಯೆಯ ಮೂಲಕ ನೇಮಕ ಮಾಡಲಾಗುವುದು. ಅರ್ಹತೆಯ ಮೇರೆಗೆ ಅವರಿಗೆ ಮುಂಬಡ್ತಿಯನ್ನು ನೀಡಲಾಗುವುದು ಮತ್ತು ಶಿಕ್ಷಕರು ಶಿಕ್ಷಣ ತಜ್ಞರಾಗಿ ಮತ್ತು ಶಿಕ್ಷಣ ಆಡಳಿತಗಾರರಾಗಿ ಕಾರ್ಯ ವಹಿಸಲು ನೆರವಾಗುವಂತೆ ಕಾಲ ಕಾಲಕ್ಕೆ ಬಹು ಮೂಲಗಳಿಂದ ಮೌಲ್ಯಮಾಪನ ಮಾಡಲಾಗುವುದು.

**ಜಿ.** ಶಾಲಾ ಆಡಳಿತ: ಶಾಲೆಗಳನ್ನು ಒಂದೊಂದು ಗುಂಪುಗಳನ್ನಾಗಿ ಮಾಡಿ ಶಾಲಾ ಸಂಕೀರ್ಣಗಳನ್ನು (10 ರಿಂದ 20 ಸಾರ್ವಜನಿಕ ಶಾಲೆಗಳ ಗುಂಪು/ಕ್ಲಸ್ಟರ್) ನಿರ್ಮಿಸಲಾಗುವುದು. ಇದು ಶಾಲಾ ಆಡಳಿತದ ಮೂಲ ಘಟಕವಾಗಿದ್ದು, ಉತ್ತಮ ವೃತ್ತಿಪರ ಶಿಕ್ಷಕರ ಜೊತೆಗೆ ಮೂಲಭೂತ ಸೌಕರ್ಯಗಳು ಮತ್ತು ಶೈಕ್ಷಣಿಕ (ಉದಾ, ಗ್ರಂಥಾಲಯ) ಮತ್ತು ಮಾನವ ಸಂಪನ್ಮೂಲಗಳ (ಉದಾ. ಕಲೆ ಮತ್ತು ಸಂಗೀತ ಶಿಕ್ಷಕರು) ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುತ್ತದೆ.

**ಎಚ್.** ಶಾಲೆಗಳ ನಿಯಂತ್ರಣ: ಶಾಲಾ ಕಾರ್ಯನಿರ್ವಹಣೆ ಹಾಗೂ ನಿಯಂತ್ರಣಗಳನ್ನು ಭಿನ್ನ ಭಿನ್ನ ಸಂಸ್ಥೆಗಳ ಮೂಲಕ ಜಾರಿಗೊಳಿಸಲಾಗುವುದು. ಇದು ಹಿತಾಸಕ್ತಿಗಳ ಸಂಘರ್ಷವನ್ನು ತಪ್ಪಿಸಲು ನೆರವಾಗುತ್ತದೆ. ನೀತಿ ನಿರೂಪಣೆ, ನಿಯಂತ್ರಣ, ಕಾರ್ಯಾಚರಣೆ ಮತ್ತು ಶೈಕ್ಷಣಿಕ ವಿಷಯಗಳನ್ನು ನಿರ್ವಹಿಸಲು ಭಿನ್ನ ಭಿನ್ನವಾದ ಹಾಗೂ ಸ್ಪಷ್ಟವಾದ ವ್ಯವಸ್ಥೆಗಳನ್ನು ರೂಪಿಸಲಾಗುತ್ತದೆ.

## II. ಉನ್ನತ ಶಿಕ್ಷಣ

**ಎ.** ಹೊಸ ಸಂರಚನೆ: ಬೃಹತ್ ಗಾತ್ರದ, ಉತ್ತಮ ಸಂಪನ್ಮೂಲಗಳನ್ನು ಹೊಂದಿರುವ ಬಹುಶಿಸ್ತೀಯ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ನಿಟ್ಟಿನಲ್ಲಿ ಹೊಸ ಮುನ್ನೋಟ ಮತ್ತು ಸಂರಚನೆಗಳನ್ನು ರೂಪಿಸಲಾಗಿದೆ. ಈಗ ಅಸ್ತಿತ್ವದಲ್ಲಿರುವ 800 ವಿಶ್ವವಿದ್ಯಾಲಯಗಳು ಮತ್ತು 40,000 ಕಾಲೇಜುಗಳನ್ನು 15,000 ಅತ್ಯುತ್ತಮ ಗುಣಮಟ್ಟದ ಶೈಕ್ಷಣಿಕ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗುತ್ತದೆ.

**ಬಿ.** ಉದಾರವಾದಿ ಶಿಕ್ಷಣ: ವಿಜ್ಞಾನ, ಕಲೆ, ಗಣಿತಶಾಸ್ತ್ರ, ಮಾನವಿಕಗಳು ಮತ್ತು ವೃತ್ತಿಪರ ಕ್ಷೇತ್ರಗಳನ್ನು ಒಟ್ಟಾಗಿ ಬೆಸೆದ ಸ್ಥೂಲವಾಗಿ ಉದಾರವಾದಿಯಾದ ಪದವಿ ಶಿಕ್ಷಣವನ್ನು ಜಾರಿಗೊಳಿಸಲಾಗುವುದು. ಈ ಶಿಕ್ಷಣಕ್ರಮವು ಕಲ್ಪನಾ ಶಕ್ತಿಯನ್ನು ವರ್ಧಿಸುವ ಮತ್ತು ಎಲ್ಲದ್ದಕ್ಕೂ ಸುಲಭವಾಗಿ ಹೊಂದಿಕೊಳ್ಳುವ ಪಠ್ಯಕ್ರಮವನ್ನು ಹೊಂದಿದ್ದು, ಸೃಜನಶೀಲ ಅಧ್ಯಯನ ಕ್ರಮ ಹಾಗೂ ಔದ್ಯಮಿಕ ಶಿಕ್ಷಣವನ್ನು ಒಳಗೊಂಡಿರುತ್ತದೆ. ಈ ಕೋರ್ಸುಗಳಿಗೆ ಅನೇಕ ರೀತಿಯಲ್ಲಿ ನೀವು ದಾಖಲಾಗಬಹುದು ಮತ್ತು ನಿರ್ಗಮಿಸಬಹುದು.

**ಸಿ.** ಆಡಳಿತ: ಈ ಸಂಸ್ಥೆಗಳನ್ನು ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾಯತ್ತತೆಯ ಆಧಾರದ ಮೇಲೆ ನಡೆಸಲಾಗುವುದು. ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯ ಆಡಳಿತವನ್ನು ಸ್ವತಂತ್ರವಾದ ಮಂಡಳಿಯು ನೋಡಿಕೊಳ್ಳುತ್ತದೆ.

**ಡಿ.** ನಿಯಂತ್ರಣ: ಸಂಸ್ಥೆಗಳ ಸಾರ್ವಜನಿಕ ಹಿತಾಸಕ್ತಿ ಮತ್ತು ಆರ್ಥಿಕ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ನೆರವಾಗುವಂತೆ ನಿಯಂತ್ರಣವು ಹಗುರವೆನಿಸಿದರೂ, ಬಿಗಿಯಾಗಿರುತ್ತದೆ. ಪ್ರಮಾಣಗಳನ್ನು ಜಾರಿಗೊಳಿಸುವುದರಲ್ಲಿ, ಹಣಕಾಸು ನಿಧಿಗಳ ವಿಚಾರದಲ್ಲಿ, ಮಾನ್ಯತೆಗೆ ಸಂಬಂಧಿಸಿದಂತೆ ಎಲ್ಲಾ

ವಿಷಯಗಳನ್ನೂ ಯಾವುದೇ ಹಿತಾಸಕ್ತಿ ಸಂಘರ್ಷಕ್ಕೆ ಎಡೆ ಇಲ್ಲದಂತೆ ನಿರ್ವಹಿಸಲು ಅವುಗಳನ್ನು ಸ್ವತಂತ್ರ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುತ್ತವೆ.

## III. ಶಿಕ್ಷಕರ ಶಿಕ್ಷಣ ಮತ್ತು ತರಬೇತಿ

ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಶಿಸ್ತುಬದ್ಧವಾಗಿದ್ದು, ಬಹುಶಿಸ್ತೀಯವಾಗಿ, ಲವಲವಿಕೆಯಿಂದ ಕೂಡಿದ್ದು ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೆ. ಶಿಕ್ಷಕರನ್ನು ರೂಪಿಸಲು 4 ವರ್ಷಗಳ ಸಂಯೋಜಿತ, ಸ್ತರನಿರ್ದಿಷ್ಟ, ವಿಷಯ ನಿರ್ದಿಷ್ಟ ಶಿಕ್ಷಣ ಪದವಿ ಕೋರ್ಸುಗಳನ್ನು ಬಹುಶಿಸ್ತೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಲಾಗುತ್ತದೆ. ಕಳಪೆ ಗುಣಮಟ್ಟದ ಮತ್ತು ಸಮರ್ಪಕವಾಗಿ ಕೆಲಸ ನಿರ್ವಹಿಸದ ಶಿಕ್ಷಕರ ತರಬೇತಿ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಗುವುದು.

## IV. ವೃತ್ತಿಪರ ಶಿಕ್ಷಣ

ವೃತ್ತಿಪರ ಶಿಕ್ಷಣವು ಉನ್ನತ ಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿರುತ್ತದೆ. ಪ್ರತ್ಯೇಕವಾದ ತಾಂತ್ರಿಕ ವಿಶ್ವವಿದ್ಯಾಲಯಗಳು, ವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯಗಳು, ಕಾನೂನು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಅಥವಾ ಈ ಕ್ಷೇತ್ರಗಳಲ್ಲಿ ಅಥವಾ ಇತರ ಕ್ಷೇತ್ರಗಳಲ್ಲಿರುವ ಸಂಸ್ಥೆಗಳನ್ನು ರದ್ದುಪಡಿಸಲಾಗುತ್ತದೆ.

## V. ಔದ್ಯೋಗಿಕ ಶಿಕ್ಷಣ

ಇದು ಸಾಮಾನ್ಯ ಶಿಕ್ಷಣದ ಅವಿಭಾಜ್ಯ ಅಂಗವಾಗಿರುತ್ತದೆ. ಈ ನೀತಿಯು 2025ರ ವೇಳೆಗೆ ಕನಿಷ್ಠ ಶೇ. 50%ರಷ್ಟು ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣದ ಸೌಲಭ್ಯವನ್ನು ನೀಡುವ ಗುರಿಯನ್ನು ಹೊಂದಿರುತ್ತದೆ.

## VI. ರಾಷ್ಟ್ರೀಯ ಸಂಸೋಧನಾ ಸಂಸ್ಥೆ (National Research Foundation)

ದೇಶಾದ್ಯಂತ ಸಂಶೋಧನೆ ಮತ್ತು ಆವಿಷ್ಕಾರಗಳ ವೇಗವರ್ಧಿಸಲು ಮತ್ತು ವಿಸ್ತರಿಸಲು ಹೊಸ ಘಟಕವನ್ನು ಸ್ಥಾಪಿಸಲಾಗುವುದು.

## VII. ಶಿಕ್ಷಣದಲ್ಲಿ ತಂತ್ರಜ್ಞಾನ

ಈ ನೀತಿಯು ತರಗತಿಯ ಪ್ರಕ್ರಿಯೆಗಳನ್ನು ಸುಧಾರಿಸಲು, ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಬೆಂಬಲಿಸಲು, ಅನನುಕೂಲಕರ ಗುಂಪುಗಳಿಗೆ ಶೈಕ್ಷಣಿಕ ಪ್ರವೇಶವನ್ನು ಹೆಚ್ಚಿಸಲು ಮತ್ತು ಶೈಕ್ಷಣಿಕ ಯೋಜನೆ, ಆಡಳಿತ ಮತ್ತು ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸಲು ಎಲ್ಲಾ ಹಂತದ ಶಿಕ್ಷಣಕ್ಕೆ ತಂತ್ರಜ್ಞಾನವನ್ನು ಸೂಕ್ತವಾಗಿ ಸಂಯೋಜಿಸುವ ಗುರಿಯನ್ನು ಹೊಂದಿದೆ.

## VIII. ವಯಸ್ಕರ ಶಿಕ್ಷಣ

ಈ ನೀತಿಯು 2030ರ ವೇಳೆಗೆ ಶೇ. 100ರಷ್ಟು ಯುವಕರ ಮತ್ತು ವಯಸ್ಕರ ಸಾಕ್ಷರತೆಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

## IX. ಭಾರತೀಯ ಭಾಷೆಗಳಿಗೆ ಉತ್ತೇಜನ

ಎಲ್ಲಾ ಭಾರತೀಯ ಭಾಷೆಗಳನ್ನು ಸಂರಕ್ಷಿಸಿ, ಅವುಗಳ ಬೆಳವಣಿಗೆ ಮತ್ತು ಜೀವಂತಿಕೆಯನ್ನು ಕಾಪಾಡುವುದನ್ನು ಈ ನೀತಿಯ ಖಾತರಿಪಡಿಸುತ್ತದೆ.

## X. ಶಿಕ್ಷಣಕ್ಕಾಗಿ ಹಣಕಾಸು ಪೂರೈಕೆ

ಸಾರ್ವಜನಿಕ ಶಿಕ್ಷಣವನ್ನು ವಿಸ್ತರಿಸಲು ಮತ್ತು ಬಲಗೊಳಿಸಲು ಸಾಕಷ್ಟು ಮಟ್ಟದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಮಾಡಲಾಗುವುದು.

## XI. ರಾಷ್ಟ್ರೀಯ ಶಿಕ್ಷಣ ಆಯೋಗ:

ಮಾನ್ಯ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ಸ್ಥಾಪಿಸಲಾಗುವುದು. ಇದು ಭಾರತದಲ್ಲಿ ಶೈಕ್ಷಣಿಕ ಮುನ್ನೋಟವನ್ನು ಜಾರಿಗೊಳಿಸಲು ಬದ್ಧವಾಗಿರುತ್ತದೆ.

# ನೀತಿಯ ಅವಲೋಕನ: ಮುಖ್ಯಾಂಶಗಳು

# ಶಾಲಾ ಶಿಕ್ಷಣ

## 1. ಪ್ರಾರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಬಲಪಡಿಸುವುದು

**ಉದ್ದೇಶ:** 3-6 ವರ್ಷದೊಳಗಿನ ಪ್ರತಿ ಮಗುವಿಗೆ 2025 ರ ವೇಳೆಗೆ ಉಚಿತ, ಸುರಕ್ಷಿತ, ಉತ್ತಮ ಗುಣಮಟ್ಟದ, ಅಭಿವೃದ್ಧಿಗೆ ಸೂಕ್ತವಾದ ಆರೈಕೆ ಮತ್ತು ಶಿಕ್ಷಣವನ್ನು ನೀಡುವುದು.

ಪ್ರಾರಂಭಿಕ ಬಾಲ್ಯದ ಶಿಕ್ಷಣವು ವ್ಯಕ್ತಿಯೊಬ್ಬನ ಶೈಕ್ಷಣಿಕ ವಿಕಾಸದಲ್ಲಿ ಎಂತಹ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ನೀತಿಯು ಒತ್ತಿ ಹೇಳುತ್ತದೆ.

**ಎ.** ಬಾಲ್ಯದ ಶಿಕ್ಷಣದ **ಸೌಲಭ್ಯಗಳ ಗಮನಾರ್ಹ ವಿಸ್ತರಣೆ ಮತ್ತು ಬಲಪಡಿಸುವಿಕೆಯು** ಸ್ಥಳೀಯ ಅಗತ್ಯತೆಗಳು, ಭೌಗೋಳಿಕತೆ ಮತ್ತು ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳ ಕುರಿತು ಬಹುಮುಖಿ ವಿಧಾನದ ಮೂಲಕ ನಡೆಯುತ್ತವೆ.

**ಬಿ.** ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಜಿಲ್ಲೆಗಳಿಗೆ / ಪ್ರದೇಶಗಳಿಗೆ ವಿಶೇಷ ಗಮನವನ್ನು ಮತ್ತು ಆದ್ಯತೆಯನ್ನು ನೀಡಲಾಗುವುದು. ಗುಣಮಟ್ಟ ಮತ್ತು ಫಲಿತಾಂಶಗಳ ಮೇಲ್ವಿಚಾರಣೆ ನಿಗಾ ಇಡಲು ಸೂಕ್ತ ಪ್ರಕ್ರಿಯೆಗಳನ್ನು ಸ್ಥಾಪಿಸಲಾಗುವುದು.

**ಸಿ.** ಪ್ರಾರಂಭಿಕ ಬಾಲ್ಯದ ಶಿಕ್ಷಣಕ್ಕಾಗಿ ಪಠ್ಯಕ್ರಮ ಮತ್ತು ಶೈಕ್ಷಣಿಕ ಚೌಕಟ್ಟನ್ನು ಶಿಕ್ಷಕರು ಮತ್ತು ಪೋಷಕರಿಗಾಗಿ ಸಿದ್ಧಪಡಿಸಲಾಗುವುದು. ಈ ಚೌಕಟ್ಟು 0 ಯಿಂದ 3 ವರ್ಷದವರೆಗಿನ ಮಕ್ಕಳ ಬುದ್ಧಿಮತ್ತೆಯ ಬೆಳವಣಿಗೆಗಾಗಿ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ಹಾಗೂ 3 ರಿಂದ 8 ವರ್ಷದವರೆಗಿನ ಮಕ್ಕಳಿಗೆ ಶೈಕ್ಷಣಿಕ ಮಾರ್ಗದರ್ಶಿ ಸೂತ್ರಗಳನ್ನು ಹೊಂದಿರಲಿದೆ.

**ಡಿ.** ಹಂತ-ನಿರ್ದಿಷ್ಟ ತರಬೇತಿ, ಮಾರ್ಗದರ್ಶನ ಮತ್ತು ನಿರಂತರ ವೃತ್ತಿಪರ ಅಭಿವೃದ್ಧಿ ಮತ್ತು ವೃತ್ತಿ ಬೆಳವಣಿಗೆಯ ಅವಕಾಶಗಳ ಮೂಲಕ ವಿದ್ಯಾರ್ಥಿಸ್ನೇಹಿ ವಾತಾವರಣದ ವಿನ್ಯಾಸ ಮತ್ತು ಬಾಲ್ಯದ ಶಿಕ್ಷಣಕ್ಕಾಗಿ ಉನ್ನತ-ಗುಣಮಟ್ಟದ ಶಿಕ್ಷಣತಜ್ಞರ ವೃತ್ತಿಪರತೆಯನ್ನು ಸಹ ಕೈಗೊಳ್ಳಲಾಗುವುದು.

**ಇ.** ಬಾಲ್ಯದ ಹಂತದ ಶಿಕ್ಷಣದ ಎಲ್ಲಾ ಅಂಶಗಳೂ **ಶಿಕ್ಷಣ ಸಚಿವಾಲಯದ** ವ್ಯಾಪ್ತಿಗೆ ಬರುತ್ತದೆ (ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಎಂದು ಕರೆಯಲಾಗುತ್ತಿರುವ ಇದನ್ನು ಇನ್ನು ಮುಂದೆ ಶಿಕ್ಷಣ ಸಚಿವಾಲಯವೆಂದು ಮರುನಾಮಕರಣ ಮಾಡಲಾಗುತ್ತದೆ). ಇದು ಪ್ರಾರಂಭಿಕ ಬಾಲ್ಯದ ಶಿಕ್ಷಣವನ್ನು ಶಾಲಾ ಶಿಕ್ಷಣದ ಜೊತೆಗೆ ಪರಿಣಾಮಕಾರಿಯಾಗಿ ಬೆಸೆಯಲು ಸಾಧ್ಯಗೊಳಿಸುತ್ತದೆ. ಈ ಪರಿವರ್ತನೆಯ ಯೋಜನೆಯನ್ನು 2019ರ ವೇಳೆಗೆ ಶಿಕ್ಷಣ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಗಳ ಸಹಯೋಗದಲ್ಲಿ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

**ಎಫ್.** ಶಾಲಾ-ಪೂರ್ವ ಶಿಕ್ಷಣದ (ಖಾಸಗಿ, ಸಾರ್ವಜನಿಕ ಮತ್ತು ಜನಪರ) ನೀತಿ ನಿಯಮಾವಳಿಗಳ ಅನುಸರಣೆಗಾಗಿ ಪರಿಣಾಮಕಾರಿಯಾದ **ಗುಣಮಟ್ಟದ ನಿಯಂತ್ರಣಾ ಮತ್ತು ಮಾನ್ಯತಾ ವ್ಯವಸ್ಥೆಯೊಂದನ್ನು** ಜಾರಿಗೊಳಿಸಲಾಗುವುದು.

**ಜಿ.** ಪೋಷಕರು ತಮ್ಮ ಮಕ್ಕಳ ಕಲಿಕೆಯ ಅಗತ್ಯಗಳನ್ನು ಸಕ್ರಿಯವಾಗಿ ಬೆಂಬಲಿಸಲು ಅನುವು ಮಾಡಿಕೊಡಲು ದೊಡ್ಡ ಪ್ರಮಾಣದ ಮತ್ತು ವ್ಯಾಪಕವಾದ ಮಾಹಿತಿಯ ಪ್ರಸಾರದ ಮೂಲಕ **ಭಾಗಿದಾರರಿಂದ ಬೇಡಿಕೆಯನ್ನು** ಸೃಷ್ಟಿಸಲಾಗುತ್ತದೆ.

**ಎಚ್.** 3 ರಿಂದ 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಲಭ್ಯಗೊಳಿಸಲು ಶಿಕ್ಷಣ ಹಕ್ಕು ಕಾಯಿದೆ, 2009 ನ್ನು ವಿಸ್ತರಿಸಲಾಗುವುದು.

## 2. ಎಲ್ಲಾ ಮಕ್ಕಳಲ್ಲೂ ಸಾಕ್ಷರತೆ ಮತ್ತು ಗಣಿತ ಕೌಶಲಗಳ ಭದ್ರಬುನಾದಿ ರೂಪಿಸುವುದು

**ಉದ್ದೇಶ:** 2025ರ ವೇಳೆಗೆ 5 ಮತ್ತು ಅದಕ್ಕಿಂತ ಮೇಲಿನ ತರಗತಿಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಕ್ಷರತೆ ಮತ್ತು ಗಣಿತ ಕೌಶಲಗಳ ಭದ್ರಬುನಾದಿಯನ್ನು ಹೊಂದಿರಬೇಕು.

ನೀತಿಯು ಪ್ರಾರಂಭಿಕ ಹಂತದ ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳ ಕಲಿಕೆಯ ತೀವ್ರ ಸಮಸ್ಯೆಯನ್ನು ಗುರುತಿಸಿ ಅದಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ.

ಎ. ಪೌಷ್ಟಿಕತೆ ಮತ್ತು ಕಲಿಕೆಗಳು ಒಂದಕ್ಕೊಂದು ಬೇರ್ಪಡಿಸಲಾರದ ಸಂಬಂಧ ಹೊಂದಿವೆ. **ಮಧ್ಯಾನ್ಹದ ಬಿಸಿಯೂಟ** ಕಾರ್ಯಕ್ರಮವನ್ನು **ವಿಸ್ತರಿಸಲಾಗುತ್ತದೆ** - ಈ ಕಾರ್ಯಕ್ರಮದಡಿಯಲ್ಲಿ ಎಲ್ಲಾ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಪ್ರತಿ ದಿನವೂ ಪೌಷ್ಟಿಕತೆಯಿಂದ ಕೂಡಿದ ಬೆಳಗ್ಗಿನ ಉಪಹಾರ ಮತ್ತು ಮಧ್ಯಾನ್ಹದ ಬಿಸಿಯೂಟವನ್ನು ನೀಡಲಾಗುತ್ತದೆ. ಗುಣಮಟ್ಟದ ಆಹಾರವನ್ನು ಒದಗಿಸುವ ವೆಚ್ಚವನ್ನು ಭರಿಸಲು ಆಹಾರದ ವೆಚ್ಚ ಮತ್ತು ಹಣದುಬ್ಬರಕ್ಕೆ ಸಂಬಂಧವನ್ನು ಕಲ್ಪಿಸಲಾಗುತ್ತದೆ.

ಬಿ. **1 ರಿಂದ 5ನೇ ತರಗತಿಯವರೆಗೆ ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳ ಕಲಿಕೆಯ ಬುನಾದಿಯ ಮೇಲೆ ವಿಶೇಷ ಗಮನವನ್ನು** ನೀಡಲಾಗುತ್ತದೆ ಮತ್ತು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲು ಮತ್ತು ಅವರಿಗೆ ಸೂಕ್ತ ಗುಣಮಟ್ಟದ ಸಂಪನ್ಮೂಲಗಳನ್ನು ಒದಗಿಸಲು ಸಮರ್ಪಕವಾದ ವ್ಯವಸ್ಥೆಯೊಂದನ್ನು ರೂಪಿಸಲಾಗುವುದು. ರಾಷ್ಟ್ರೀಯ ಶಿಕ್ಷಕರ ಪೋರ್ಟಲ್‌ನಲ್ಲಿ (National Teacher's Portal) ಭಾಷಾ ಕಲಿಕೆಗೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ಸಂಬಂಧಿಸಿದಂತೆ ಸಂಪನ್ಮೂಲಗಳು ಲಭ್ಯವಿರುತ್ತವೆ.

ಸಿ. ಶಿಕ್ಷಕರಿಗೆ ಕಲಿಸುವ ಪ್ರಕ್ರಿಯೆಯಲ್ಲಿ ನೆರವಾಗಲು ತಾಂತ್ರಿಕ ಸಾಧನಗಳನ್ನು ರೂಪಿಸಲಾಗುತ್ತದೆ. ಮತ್ತು ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಮತ್ತು ಸಂವಹನ ಕೌಶಲತೆಯನ್ನು ಕಲಿಸಲು ಶಾಲಾ ಹಾಗೂ ಸಾರ್ವಜನಿಕ ಗ್ರಂಥಾಲಯಗಳನ್ನು ಬಲಪಡಿಸಿ ವಿಸ್ತರಿಸಲಾಗುವುದು.

ಡಿ. 1ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳು ಮೂರು ತಿಂಗಳ **ಶಾಲಾ ತಯಾರಿ ಮಾಡ್ಯೂಲ್‌ಗೆ ಒಳಗಾಗುತ್ತಾರೆ.**

ಇ. ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ಭದ್ರಬುನಾದಿಯನ್ನು ಒದಗಿಸುವ ನಿಟ್ಟಿನಲ್ಲಿ **ಶಿಕ್ಷಕರ ಶಿಕ್ಷಣ ಮತ್ತು ತರಬೇತಿಯನ್ನು ಮರುವಿನ್ಯಾಸಗೊಳಿಸಲಾಗುವುದು.**

**ಎಫ್. ರಾಷ್ಟ್ರೀಯ ಬೋಧಕರ ಕಾರ್ಯಕ್ರಮ** (National Tutors Programme) (ವರಿಷ್ಠ ಬೋಧಕರನ್ನು ಒಳಗೊಂಡಿರುತ್ತದೆ) ಮತ್ತು **ಪರಿಹಾರಾತ್ಮಕ ಬೋಧನಾ ನೆರವು ಕರ್ಯಕ್ರಮವನ್ನು** (Remedial Instructional Aides Programme) (ಸಮುದಾಯದಿಂದ ಬೋಧಕರನ್ನು ಆಯ್ಕೆ ಮಾಡಿಕೊಳ್ಳಲಾಗುವುದು) ಜಾರಿಗೊಳಿಸಲಾಗುವುದು.

**ಜಿ.** ಪ್ರತಿ ಶಾಲೆಯಲ್ಲೂ ಎಲ್ಲಾ ತರಗತಿಗಳಲ್ಲೂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಪಾತವನ್ನು 30:1 ಕ್ಕೆ ಖಚಿತಪಡಿಸಲಾಗುವುದು.

**ಎಚ್. ಸಾಮಾಜಿಕ ಕಾರ್ಯಕರ್ತರು ಮತ್ತು ಸಲಹೆಗಾರರು** ಮಕ್ಕಳ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ನೆರವಾಗುತ್ತಾರೆ. ನೀತಿಯಲ್ಲಿ ನಿರೂಪಿಸಿರುವ ಭಾಷಾ ಕಲಿಕೆ ಮತ್ತು ಗಣಿತ ಕೌಶಲಗಳ ಕಲಿಕೆಗೆ ಭದ್ರಬುನಾದಿಯನ್ನು ಒದಗಿಸಲು ವಿದ್ಯಾರ್ಥಿಗಳ **ಪೋಷಕರು** ಮತ್ತು **ಸ್ಥಳೀಯ ಸಮುದಾಯಗಳ ಮತ್ತು ಸ್ವಯಂಸೇವಕರ** ಭಾಗವಹಿಸುವಿಕೆ ಇರುವಂತೆ ನೋಡಿಕೊಳ್ಳಲಾಗುತ್ತದೆ.

## 3. ಶಿಕ್ಷಣದ ಎಲ್ಲಾ ಮಟ್ಟದಲ್ಲೂ ಸಾರ್ವತ್ರಿಕ ಪ್ರವೇಶ ಮತ್ತು ಧಾರಣತೆಯನ್ನು ಕಾಪಾಡಿಕೊಳ್ಳುವುದು.

**ಉದ್ದೇಶ:** 2030ರ ವೇಳೆಗೆ 3 ರಿಂದ 18 ವರ್ಷ ವಯಸ್ಸಿನವರೆಗಿನ ವಿದ್ಯಾರ್ಥಿಗಳು ಉಚಿತ ಮತ್ತು ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಅನುಕೂಲ ಮಾಡಿಕೊಡುವುದು ಮತ್ತು ಅವರು ಅದರಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು.

ಶಾಲಾ ಮಕ್ಕಳ ದಾಖಲಾತಿಯಲ್ಲಿ ಪ್ರಗತಿ ಹೊಂದಿರುವುದನ್ನು ನಾವು ಗಮನಿಸುತ್ತಲೇ ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಉಳಿಸಿಕೊಳ್ಳುವ ಧಾರಣ ಶಕ್ತಿಯ ಬಗ್ಗೆ ನೀತಿಯು ಕಳವಳವನ್ನು ವ್ಯಕ್ತಪಡಿಸುತ್ತದೆ.

**ಎ.** ಹಲವಾರು ಕ್ರಮಗಳ ಮೂಲಕ 2030ರ ವೇಳೆಗೆ ಶಾಲಾಪೂರ್ವ ಹಂತದಿಂದ ಪ್ರೌಢಶಾಲಾ ಹಂತದವರೆಗೆ **ಒಟ್ಟು ದಾಖಲಾತಿ ಅನುಪಾತ ಶೇ. 100%** ರಷ್ಟನ್ನು ಸಾಧಿಸಬೇಕು.

**ಬಿ.** ಈಗ ಅಸ್ತಿತ್ವದಲ್ಲಿರುವ ಶಾಲೆಗಳಲ್ಲಿನ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ಅತಿ ಕಡಿಮೆ ಸೌಲಭ್ಯಗಳಿರುವ ಪ್ರದೇಶಗಳಲ್ಲಿ ಹೊಸ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ, ಸಾರಿಗೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ಒದಗಿಸುವ ಮೂಲಕ ಮತ್ತು ಎಲ್ಲಾ ವಿದ್ಯಾರ್ಥಿಗಳ, ಅದರಲ್ಲೂ ಹೆಣ್ಣು ಮಕ್ಕಳ ಸುರಕ್ಷತೆಯನ್ನು ಕಾಪಾಡುವ ಕ್ರಮಗಳ ಮೂಲಕ ಶಾಲೆಗೆ **ಪ್ರವೇಶದ ನ್ಯೂನ್ಯತೆಗಳನ್ನು** ಸರಿದೂಗಿಸಲಾಗುವುದು.

**ಸಿ.** ಶಾಲೆಗೆ ದಾಖಲಾದ ಮಕ್ಕಳ ಹಾಜರಾತಿ ಮತ್ತು ಕಲಿಕೆಯ ಫಲಿತಾಂಶಗಳನ್ನು ಪತ್ತೆಹಚ್ಚುವ ಮೂಲಕ, ಶಿಕ್ಷಕರು, ಸಾಮಾಜಿಕ ಕಾರ್ಯಕರ್ತರು ಮತ್ತು ಸಲಹೆಗಾರರಿಂದ ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಕಂಡುಹಿಡಿಯುವ ಮೂಲಕ ಮತ್ತು ದೀರ್ಘಾವಧಿಯಿಂದ ಶಾಲೆಯಿಂದ ಹೊರಗುಳಿಯುವ ಹದಿಹರೆಯದವರಿಗೆ ಕಾರ್ಯಕ್ರಮಗಳನ್ನು ಮಾಡುವ ಮೂಲಕ **ಎಲ್ಲಾ ಮಕ್ಕಳ ಭಾಗವಹಿಸುವಿಕೆ ಮತ್ತು ಕಲಿಕೆಯನ್ನು** ಖಾತ್ರಿಪಡಿಸಿಕೊಳ್ಳಲಾಗುತ್ತದೆ. ಮುಕ್ತ ಹಾಗೂ ದೂರ ಶಿಕ್ಷಣ ವ್ಯವಸ್ಥೆ ಮತ್ತು ತಂತ್ರಜ್ಞಾನದ ಮೂಲಕ ಔಪಚಾರಿಕ ಹಾಗೂ ಅನೌಪಚಾರಿಕ ಕಲಿಕಾ ವಿಧಾನಗಳ ಮೂಲಕ ಅನೇಕ ರೀತಿಯಲ್ಲಿ ಕಲಿಯುವ ಸಾಧ್ಯತೆಗಳನ್ನು ಬಲಪಡಿಸಲಾಗುತ್ತದೆ.

**ಡಿ.** ಅನಾರೋಗ್ಯದ ಕಾರಣಗಳಿಗಾಗಿ ವಿದ್ಯಾರ್ಥಿಗಳು ಶಾಲೆಗೆ ಹಾಜರಾಗಲು ಕಷ್ಟವಾಗುತ್ತಿದ್ದರೆ, ಅವರು **ಸಾಧ್ಯವಾದಷ್ಟು ಬೇಗ ಶಾಲೆಗೆ ಮರಳಲು ಸಾಧ್ಯವಾಗುವಂತೆ ಮಾಡಲು** ಶಾಲೆಯಲ್ಲಿ ಆರೋಗ್ಯ ಕಾರ್ಯಕರ್ತರ ನೇಮಕ ಮಾಡಿಕೊಳ್ಳುವಿಕೆ, ವಿದ್ಯಾರ್ಥಿಗಳಲ್ಲಿ, ಪೋಷಕರಲ್ಲಿ ಮತ್ತು ಒಟ್ಟು ಸಮುದಾಯದಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ, ಹಾಗೂ ಅವರಿಗೆ ಸೂಕ್ತ ಆರೋಗ್ಯ ಸೇವೆಗಳನ್ನು ಲಭ್ಯಗೊಳಿಸುವುದು.

**ಇ.** ಸುರಕ್ಷತೆ (ದೈಹಿಕ ಮತ್ತು ಮಾನಸಿಕ), ಪ್ರವೇಶ ಮತ್ತು ಸೇರ್ಪಡೆ, ಶಾಲೆಗಳ ಲಾಭರಹಿತ ಸ್ವರೂಪ ಮತ್ತು ಕಲಿಕೆಯ ಫಲಿತಾಂಶಗಳಿಗೆ ಕನಿಷ್ಠ ಮಾನದಂಡಗಳನ್ನು ಖಾತರಿಪಡಿಸುವಾಗ **ಶಿಕ್ಷಣ ಹಕ್ಕು ಕಾಯಿದೆಯ** ಅವಶ್ಯಕತೆಗಳನ್ನು ಗಣನೀಯವಾಗಿ **ಸಡಿಲಗೊಳಿಸಲಾಗುವುದು**. ಸ್ಥಳೀಯ ವ್ಯತ್ಯಾಸಗಳು ಮತ್ತು ಪರ್ಯಾಯ ಮಾದರಿಗಳನ್ನು ಅನುಮತಿಸಲು ಇದು ಅವಕಾಶ ಮಾಡಿಕೊಡುತ್ತದೆ, ಜೊತೆಗೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಶಾಲೆಯನ್ನು ಪ್ರಾರಂಭಿಸುವುದು ಸುಲಭವಾಗುತ್ತದೆ.

**ಎಫ್.** ಶಾಲಾಪೂರ್ವದಿಂದ 12 ನೇ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು **ಶಿಕ್ಷಣ ಹಕ್ಕು ಕಾಯಿದೆಯನ್ನು** ವಿಸ್ತರಿಸಲಾಗುವುದು.

## 4. ಶಾಲಾ ಶಿಕ್ಷಣಕ್ಕಾಗಿ ಹೊಸ ಪಠ್ಯಕ್ರಮ ಮತ್ತು ಬೋಧನಾಕ್ರಮ

**ಉದ್ದೇಶ:** ಕಂಠಪಾಠದ ಕಲಿಕೆಯನ್ನು ತಪ್ಪಿಸಲು ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೆರವಾಗುವ ಹಾಗೂ 21ನೇ ಶತಮಾನದಲ್ಲಿ ಅಗತ್ಯವಿರುವ ಕೌಶಲಗಳಾದ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಬಿಡಿಸುವ ಕಲೆ, ವೈಜ್ಞಾನಿಕ ಮನೋಭಾವ, ಸಂವಹನ ಕಲೆ, ಸಹವರ್ತನೆ, ಬಹುಭಾಷಾ ಕೌಶಲ, ನೈತಿಕತೆ, ಸಾಮಾಜಿಕ ಜವಾಬ್ದಾರಿ, ಮತ್ತು ಡಿಜಿಟಲ್ ಸಾಕ್ಷರತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2022ರ ವೇಳೆಗೆ ಶಾಲಾ ಪಠ್ಯಕ್ರಮ ಮತ್ತು ಬೋಧನಾ ಕ್ರಮಗಳನ್ನು ಮಾರ್ಪಡಿಸಲಾಗುವುದು.

ಮಕ್ಕಳ ಕಲಿಯುವ ಪ್ರಕ್ರಿಯೆಯಲ್ಲಿ ವಿವಿಧ ಹಂತಗಳಲ್ಲಿ ಅವರ ಕಲಿಕೆಯ ಅಗತ್ಯಗಳಿಗೆ ತಕ್ಕಂತೆ ಮತ್ತು ಅವರ ಆಸಕ್ತಿಗಳನ್ನು ಬೆಳೆಸುವ ನಿಟ್ಟಿನಲ್ಲಿ ಸ್ಪಂದನಾಶೀಲ ಪಠ್ಯಕ್ರಮ ಮತ್ತು ಬೋಧನಾಕ್ರಮವನ್ನು ರೂಪಿಸಲಾಗುವುದು.

ಎ. **5+3+3+4 ವಿನ್ಯಾಸದ** ಆಧಾರದ ಮೇಲೆ ಪಠ್ಯಕ್ರಮ ಮತ್ತು ಬೋಧನಾಕ್ರಮ ಹಾಗೂ ಶಾಲಾ ಶಿಕ್ಷಣದ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಲಾಗಿದೆ.

- ಬುನಾದಿಯ ಹಂತ (3 ರಿಂದ 8 ವರ್ಷಗಳು): ಮಿದುಳಿನ ತೀವ್ರ ವೇಗದ ಬೇಳವಣಿಗೆ; ಆಟದ ಮತ್ತು ಹೊಸದನ್ನು ಹುಡುಕುವ ಆಧಾರದ ಮೇಲೆ ಕಲಿಕೆ.
- ಪೂರ್ವಸಿದ್ಧತಾ ಹಂತ (8 ರಿಂದ 11 ವರ್ಷಗಳು): ಆಟಗಳ ಮೂಲಕ ಮತ್ತು ಹೊಸತನ್ನು ಕಂಡು ಹಿಡಿಯುವ ಮೂಲಕ ಬೆಳವಣಿಗೆ; ರಚನಾತ್ಮಕ ಕಲಿಕೆಗೆ ಪರಿವರ್ತನೆ ಪ್ರಾರಂಭ.
- ಮಧ್ಯಮ ಹಂತ (11 ರಿಂದ 14 ವರ್ಷಗಳು): ವಿಷಯಗಳಲ್ಲಿ ಪರಿಕಲ್ಪನೆಗಳ ಕಲಿಕೆ, ಹದಿಹರೆಯದ ಅನುಭವಗಳು.
- ಪ್ರೌಢ ಹಂತ (14 ರಿಂದ 18 ವರ್ಷಗಳು): ಜೀವನೋಪಾಯ ಮತ್ತು ಉನ್ನತ ಶಿಕ್ಷಣಕ್ಕಾಗಿ ತಯಾರಿ ಮತ್ತು ಯೌವನಕ್ಕೆ ಪಾದಾರ್ಪಣೆ.

**ಬಿ.** ಪ್ರೌಢ ಹಂತವು ನಾಲ್ಕು ವರ್ಷಗಳ ಅವಧಿಯ ಅಧ್ಯಯನವಾಗಿದ್ದು ವಿದ್ಯಾರ್ಥಿಗಳು ವಿಮರ್ಶಾತ್ಮಕ ಚಿಂತನೆ, ವಿಷಯದ ಆಳವಾದ ಅಧ್ಯಯನ, ಜೀವನದ ಆಸೆಆಕಾಂಕ್ಷೆಗಳತ್ತ ಗಮನ, ಮತ್ತು ವಿದ್ಯಾರ್ಥಿಗಳಿಗೆ ಕಲಿಕೆಯ ವಿಷಯಗಳ ಆಯ್ಕೆಯಲ್ಲಿ ಸ್ವಾತಂತ್ರ್ಯ.

**ಸಿ.** ಸರ್ವತೋಮುಖ ಕಲಿಕೆಯನ್ನು ಸಾಧ್ಯಗೊಳಿಸಲು ಶಾಲಾ ಶಿಕ್ಷಣದ ವಿಷಯಗಳು ಮತ್ತು ಪ್ರಕ್ರಿಯೆಗಳನ್ನು ಮರುರೂಪಿಸಲಾಗುತ್ತದೆ. ಆಳವಾದ ಮತ್ತು ಅನುಭವ ಆಧಾರಿತ ಕಲಿಕೆಗಾಗಿ ಮುಖ್ಯ ವಿಷಯಗಳು, ಮುಖ್ಯ ವಿಚಾರಗಳನ್ನು ಕಲಿಸುವ ಮೂಲಕ **ಪಠ್ಯಕ್ರಮದ ಹೊರೆಯನ್ನು** ಇಳಿಸುವ ಪ್ರಯತ್ನವನ್ನು ಮಾಡಲಾಗುವುದು.

**ಡಿ.** ಎಲ್ಲಾ ವಿದ್ಯಾರ್ಥಿಗಳೂ ಭಾಷಾ ಕೌಶಲಗಳು, ವೈಜ್ಞಾನಿಕ ಮನೋಭಾವ, ಕಲೆ ಮತ್ತು ಸೌಂದರ್ಯಪ್ರಜ್ಞೆ, ಸಂವಹನ, ನೈತಿಕತೆ, ಡಿಜಿಟಲ್ ಸಾಕ್ಷರತೆ, ಭಾರತದ ಬಗ್ಗೆ ತಿಳಿವಳಿಕೆ, ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಸಮುದಾಯಗಳು ಎದುರಿಸುತ್ತಿರುವ ಬಹುಮುಖ್ಯ ಸವಾಲುಗಳ ಬಗ್ಗೆ ತಿಳಿದುಕೊಳ್ಳಲು ಪ್ರೋತ್ಸಾಹಿಸಲಾಗುವುದು.

**ಇ.** **ಸುಲಭಸಾಧ್ಯವಾದ ಪಠ್ಯಕ್ರಮ-** ಪಠ್ಯಕ್ರಮ, ಪಠ್ಯೇತರ ಅಥವಾ ಹೆಚ್ಚುವರಿ-ಪಠ್ಯೇತರ ಕ್ಷೇತ್ರಗಳನ್ನು ಕಠಿಣವಾಗಿ ಪ್ರತ್ಯೇಕಿಸದಿರುವುದರಿಂದ; ಕಲೆ ಮತ್ತು ವಿಜ್ಞಾನ, ಮತ್ತು 'ವೃತ್ತಿಪರ' ಮತ್ತು 'ಶೈಕ್ಷಣಿಕ' ವಿಷಯಗಳ ಸ್ಟ್ರೀಮ್‌ಗಳನ್ನು ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಬದಲಾಯಿಸುವ ಸಾಧ್ಯತೆ ಇರುವುದರಿಂದ ವಿದ್ಯಾರ್ಥಿಗಳ ಆಯ್ಕೆಯನ್ನು ಶಕ್ತಗೊಳಿಸುತ್ತವೆ.

**ಎಫ್.** ಶಾಲಾ ಶಿಕ್ಷಣವು ಕನಿಷ್ಠ 5ನೇ ತರಗತಿಯವರೆಗೆ, ಸಾಧ್ಯವಾದಲ್ಲಿ 8ನೇ ತರಗತಿಯವರೆಗೆ **ಸ್ಥಳೀಯ ಭಾಷೆ / ಮಾತೃಭಾಷೆಯಲ್ಲಿ** ಲಭ್ಯವಾಗಬೇಕು. ಅಗತ್ಯವೆನಿಸಿದೆಡೆ ಸುಲಭಸಾಧ್ಯವಾದ ದ್ವಿಭಾಷಾ ವಿಧಾನವನ್ನು ಬಳಸಬೇಕು.

**ಜಿ.** ವಿದ್ಯಾರ್ಥಿಗಳ ಅವಶ್ಯಕತೆಗಳಿಗನುಗುಣವಾಗಿ ಸ್ಥಳೀಯ ಭಾಷಾ ಪಠ್ಯಪುಸ್ತಕಗಳನ್ನು ಅವರಿಗೆ ಒದಗಿಸಲಾಗುವುದು. ದಿವ್ಯಾಂಗರಿಗೆ ವಿಶೇಷ ಪಠ್ಯಪುಸ್ತಕಗಳನ್ನು ಅಭಿವೃದ್ಧಿಪಡಿಸಿ ನೀಡಲಾಗುವುದು.

**ಎಚ್.** ದೇಶದೆಲ್ಲೆಡೆ **ತ್ರಿಭಾಷಾ ಸೂತ್ರವನ್ನು** ಕಾಯಾ ವಾಚಾ ಮನಸಾ ಅಳವಡಿಸಿಕೊಳ್ಳಲಾಗುವುದು; ಭಾಷಾ ಶಿಕ್ಷಕರನ್ನು ತರಬೇತುಗೊಳಿಸಲು ಮತ್ತು ನೇಮಕ ಮಾಡಲು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಐ.** 6-8ನೇ ತರಗತಿಯಲ್ಲಿ ವೃತ್ತಿಪರ ಕೌಶಲ ಮತ್ತು ಕರಕುಶಲತೆಯ ಬಗ್ಗೆ ಎಲ್ಲಾ ವಿದ್ಯಾರ್ಥಿಗಳು ವರ್ಷಪೂರ್ತಿ ಸರ್ವೇ ಕೋರ್ಸ್ ತೆಗೆದುಕೊಳ್ಳುವುದರೊಂದಿಗೆ ಅವರಿಗೆ ವೃತ್ತಿಪರ ಶಿಕ್ಷಣ ಪರಿಚಯವಾಗಲು ಪ್ರಾರಂಭವಾಗುತ್ತದೆ. 9-12ನೇ ತರಗತಿಯಲ್ಲಿ, ಮಕ್ಕಳು ಹೆಚ್ಚು ಸಾಂಪ್ರದಾಯಿಕ ಶೈಕ್ಷಣಿಕ ಕೋರ್ಸುಗಳ ಜೊತೆಗೆ ವೃತ್ತಿಪರ ಕೋರ್ಸುಗಳಿಗೆ ಪ್ರವೇಶವನ್ನು ಹೊಂದಿರುತ್ತಾರೆ, ಹೀಗೆ ವಿದ್ಯಾರ್ಥಿಗಳಿಗೆ 'ಮಿಕ್ಸ್ ಮತ್ತು ಮ್ಯಾಚ್' ಆಯ್ಕೆ ಇರುತ್ತದೆ.

**ಜೆ.** **ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು** (National Curriculum Framework) 2020ರ ವೇಳೆಗೆ ಪುನರ್ ಪರಿಶೀಲನೆಗೆ ಒಳಪಡಿಸಲಾಗುತ್ತದೆ ಮತ್ತು ಅದನ್ನು ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಿಸಲಾಗುತ್ತದೆ. ಹೊಸ ಪಠ್ಯಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ಮತ್ತು ಉತ್ತಮ ಗುಣಮಟ್ಟದ ಅನುವಾದವನ್ನು ಮಾಡಲಾಗುತ್ತದೆ.

**ಕೆ.** ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಬೆಂಬಲಿಸುವಂತೆ **ಮೌಲ್ಯಮಾಪನವನ್ನು** ಪರಿವರ್ತಿಸಲಾಗುತ್ತದೆ. ಎಲ್ಲಾ ಪರೀಕ್ಷೆಗಳು (ಬೋರ್ಡ್ ಪರೀಕ್ಷೆಗಳೂ ಸೇರಿದಂತೆ) ವಿದ್ಯಾರ್ಥಿಗಳ ವಿಷಯ ಗ್ರಹಿಕೆ ಮತ್ತು ಕೌಶಲಗಳನ್ನು ಮತ್ತು ಇನ್ನಿತರ ಉನ್ನತಮಟ್ಟದ ಕೌಶಲಗಳನ್ನು ಪರೀಕ್ಷಿಸುತ್ತವೆ. 2025 ರ ವೇಳೆಗೆತ್ತಿಗೆ, ಮಾಧ್ಯಮಿಕ ಶಾಲಾ

ಮಟ್ಟದಲ್ಲಿ ಮತ್ತು ಅದಕ್ಕಿಂತ ಮೇಲಿನ ತರಗತಿಗಳ ಮೌಲ್ಯಮಾಪನವು ಕಂಪೂಟರ್ ಅಳವಡಿತ ಪರೀಕ್ಷೆಗಳ ಮೂಲಕ ನಡೆಯುತ್ತವೆ. 2020/2021 ರಿಂದ, ಸ್ವಾಯತ್ತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (National Testing Agency) ಯೋಗ್ಯತಾ (ಆಪ್ಟಿಟ್ಯೂಡ್) ಪರೀಕ್ಷೆಗಳನ್ನು ಮತ್ತು ವಿವಿಧ ವಿಷಯಗಳಲ್ಲಿ ಪರೀಕ್ಷೆಗಳನ್ನು ನಿರ್ವಹಿಸುತ್ತದೆ, ಇದನ್ನು ವರ್ಷದಲ್ಲಿ ಅನೇಕ ಸಂದರ್ಭಗಳಲ್ಲಿ ತೆಗೆದುಕೊಳ್ಳಬಹುದು.

**ಎಲ್.** ವಿದ್ಯಾರ್ಥಿಗಳ **ಪ್ರತಿಭೆ ಮತ್ತು ಆಸಕ್ತಿಗಳನ್ನು** ಗುರುತಿಸಿ ಅವುಗಳನ್ನು ಶಾಲಾ ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದ ವಿಷಯಾಧಾರಿತ, ಯೋಜನಾ ಆಧಾರಿತ ಕ್ಲಬ್‌ಗಳ ಮೂಲಕ ಪ್ರೋತ್ಸಾಹಿಸಲಾಗುತ್ತದೆ. ಹಾಗೆಯೇ ಬೇಸಿಗೆ ಶಿಬಿರಗಳನ್ನು ಮತ್ತು ಒಲಿಂಪಿಯಾಡ್ ಮತ್ತು ಇನ್ನಿತರ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

## 5. ಶಿಕ್ಷಕರು - ಬದಲಾವಣೆಯ ಹರಿಕಾರರು

**ಉದ್ದೇಶ:** ಶಾಲಾ ಶಿಕ್ಷಣದ ಎಲ್ಲಾ ಹಂತದ ಎಲ್ಲ ವಿದ್ಯಾರ್ಥಿಗಳೂ ವಿಷಯಾಸಕ್ತ, ಪ್ರೇರಿತ, ಹೆಚ್ಚು ಅರ್ಹತೆ ಹೊಂದಿರುವ, ವೃತ್ತಿಪರವಾಗಿ ತರಬೇತಿ ಪಡೆದ ಮತ್ತು ಸುಸಜ್ಜಿತ ಶಿಕ್ಷಕರಿಂದ ಕಲಿಸುವುದನ್ನು ಖಚಿತಪಡಿಸಿಕೊಳ್ಳುವುದು.

ಶಿಕ್ಷಕರು 'ನಮ್ಮ ಸಮಾಜದ ಅತಿ ಮುಖ್ಯ ವ್ಯಕ್ತಿಗಳು ಮತ್ತು ಬದಲಾವಣೆಯ ಹರಿಕಾರರು' ಎಂದು ಈ ನೀತಿಯು ನಂಬಿರುತ್ತದೆ. ಗುಣಮಟ್ಟದ ಶಿಕ್ಷಣವನ್ನು ಹೆಚ್ಚಿಸುವ ಯಾವುದೇ ಪ್ರಯತ್ನದ ಯಶಸ್ಸು ಶಿಕ್ಷಕರ ಗುಣಮಟ್ಟವನ್ನು ಅವಲಂಬಿಸಿರುತ್ತದೆ.

**ಎ.** ನಾಲ್ಕು ವರ್ಷದ ಸಂಯೋಜಿತ ಬಿ.ಎಡ್. ಕೋರ್ಸಿಗೆ ದಾಖಲಾಗಲು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಮತ್ತು ಆದಿವಾಸಿ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳಿಗೆ **ಅರ್ಹತೆ ಆಧಾರಿತ ವಿದ್ಯಾರ್ಥಿ ವೇತನಗಳನ್ನು** ನೀಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವರಿಗೆ ಸ್ಥಳೀಯವಾಗಿ ಉದ್ಯೋಗವನ್ನು ಕೂಡ ನೀಡಲಾಗುತ್ತದೆ. ಅದರಲ್ಲೂ ಈ ಯೋಜನೆಯನ್ನು ನಿರ್ದಿಷ್ಟವಾಗಿ ಮಹಿಳಾ ವಿದ್ಯಾರ್ಥಿಗಳನ್ನು ಗುರಿಯಾಗಿಟ್ಟುಕೊಂಡು ಯೋಜಿಸಲಾಗಿದೆ.

**ಬಿ.** ಎಲ್ಲಾ ಶಾಲೆಗಳಲ್ಲಿ ಸಮಗ್ರವಾಗಿ ಶಿಕ್ಷಕರ ಅವಶ್ಯಕತೆ ಯೋಜನೆಯನ್ನು ಆಧರಿಸಿ ದೃಢವಾದ ಪ್ರಕ್ರಿಯೆಯ ಮೂಲಕ **ಶಿಕ್ಷಕರ ನೇಮಕಾತಿಯನ್ನು** ಮಾಡಲಾಗುವುದು. ಇಲ್ಲಿ ವೈವಿಧ್ಯತೆಯನ್ನು ಖಾತರಿಪಡಿಸುತ್ತಾ ಸ್ಥಳೀಯರು ಮತ್ತು ಸ್ಥಳೀಯ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಶಿಕ್ಷಕರಿಗೆ ಆದ್ಯತೆ ನೀಡಲಾಗುತ್ತದೆ. ಮೊದಲ ಹಂತವೆಂದರೆ, ಮರುವಿನ್ಯಾಸಗೊಳಿಸಲಾದ ಶಿಕ್ಷಕರ ಅರ್ಹತಾ ಪರೀಕ್ಷೆ, ನಂತರ ಸಂದರ್ಶನ ಮತ್ತು ಬೋಧನಾ ಪ್ರಾತ್ಯಕ್ಷಿಕೆ. ಈಗ ಅನೇಕ ರಾಜ್ಯಗಳಲ್ಲಿ ಮಾಡುತ್ತಿರುವಂತೆ ಶಿಕ್ಷಕರನ್ನು ಜಿಲ್ಲೆಗೆ ನೇಮಕ ಮಾಡಿಕೊಳ್ಳಲಾಗುತ್ತದೆ ಮತ್ತು ಶಾಲಾ ಸಂಕೀರ್ಣಕ್ಕೆ ನೇಮಕ ಮಾಡಲಾಗುತ್ತದೆ ಮತ್ತು ಪಾರದರ್ಶಕ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಮೂಲಕ ಸ್ಥಿರ ಅವಧಿ ಮತ್ತು ನಿಯಮ ಆಧಾರಿತ ವರ್ಗಾವಣೆಯನ್ನು ಮಾಡಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕಲಿಸಲು ಅವರಿಗೆ ಪ್ರೋತ್ಸಾಹಧನ ನೀಡಲಾಗುವುದು.

**ಸಿ.** 'ಪ್ಯಾರಾ-ಟೀಚರ್ಸ್' (ಅನರ್ಹ, ಗುತ್ತಿಗೆ ಶಿಕ್ಷಕರು) ಅಭ್ಯಾಸವನ್ನು 2022ರ ವೇಳೆಗೆ ದೇಶಾದ್ಯಂತ ನಿಲ್ಲಿಸಲಾಗುವುದು.

**ಡಿ.** ಶಿಕ್ಷಕರು ತಾವು ಏನನ್ನು ಕಲಿಯಲು ಬಯಸುತ್ತಾರೋ ಅವುಗಳನ್ನು ಕಲಿಯಲು ಅನುಕೂಲವಾಗುವಂತೆ ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿಯು ನಮ್ಯ ಮತ್ತು ಮಾಡ್ಯುಲರ್ ವಿಧಾನವನ್ನು ಆಧರಿಸಿದೆ. ಈಗಷ್ಟೇ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸುತ್ತಿರುವ ಶಿಕ್ಷಕರ ಮೇಲೆ ಗಮನವನ್ನು ಕೇಂದ್ರೀಕರಿಸಿ ಅವರಿಗೆ

ಮಾರ್ಗದರ್ಶನ ನೀಡಲಾಗುವುದು. ಆಯ್ಕೆ ಆಧಾರಿತ ವೃತ್ತಿಪರ ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು ಮತ್ತು ಪ್ರತಿ ಶಿಕ್ಷಕರ ವೃತ್ತಿಪರ ಪಥವನ್ನು ಪತ್ತೆಹಚ್ಚಲು ರಾಜ್ಯಗಳು ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು. ಕೇಂದ್ರೀಕೃತ ಪಠ್ಯಕ್ರಮವಾಗಲಿ, ಮೇಲಿನಿಂದ ನಿರ್ಧಾರವಾದ ತರಬೇತಿ ವಿಧಾನವಾಗಲಿ, ಅತಿಯಾದ ಕಟ್ಟುನಿಟ್ಟಿನ ನಿಯಮಾವಳಿಗಳಾಗಲಿ ಇರುವುದಿಲ್ಲ. ಈ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಸಂಪನ್ಮೂಲ ವ್ಯಕ್ತಿಗಳನ್ನು ಬಹಳ ಜಾಗರೂಕತೆಯಿಂದ ಆಯ್ಕೆ ಮಾಡಿ ಅವರಿಗೆ ಬಹಳ ಪರಿಣಾಮಕಾರಿಯಾದ ತರಬೇತಿಯನ್ನು ನೀಡಿ ನೇಮಕ ಮಾಡಲಾಗುವುದು.

ಇ. **ಶಿಕ್ಷಕರ ಕೆಲಸವನ್ನು ಸುಗಮಗೊಳಿಸಲು** ಅಗತ್ಯವಿರುವ ಭೌತಿಕ ಮೂಲಭೂತ ಸೌಕರ್ಯಗಳು, ಸೌಲಭ್ಯಗಳು ಮತ್ತು ಕಲಿಕಾ ಸಂಪನ್ಮೂಲಗಳನ್ನು ಒದಗಿಸಲಾಗುವುದು ಮತ್ತು ಅಗತ್ಯ ಶಿಕ್ಷಕ-ವಿದ್ಯಾರ್ಥಿಗಳ ಅನುಪಾತವನ್ನು ಅನುಸರಿಸಲಾಗುವುದು. ಎಲ್ಲಾ ವಿದ್ಯಾರ್ಥಿಗಳು ಕಲಿಯುವುದನ್ನು ಖಚಿತಪಡಿಸಿಕೊಳ್ಳಲು ಶಿಕ್ಷಕರಿಗೆ ಸಹಾಯ ಮಾಡಲು ಎಲ್ಲಾ ಹಂತಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಯೋಜಿಸಲಾಗುವುದು.

**ಎಫ್.** ಶಾಲಾ ಸಮಯದಲ್ಲಿ ಶಿಕ್ಷಕರು ಬೋಧನೇತರ ಚಟುವಟಿಕೆಗಳಿಂದ (ಉದಾಹರಣೆಗೆ ಮಧ್ಯಾನ್ಹದ ಬಿಸಿಯೂಟ, ಶಾಲಾ ಸಾಮಗ್ರಿಗಳ ಸರಬರಾಜು, ಇತ್ಯಾದಿ) **ಬೋಧನೆಗೆ ಅಡಚಣೆಯಾಗದಂತೆ ಬೋಧಿಸಲು** ಸಾಧ್ಯವಾಗಬೇಕು. ಪ್ರತಿಯಾಗಿ, ಶಿಕ್ಷಕರು ಯಾವುದೇ ಕಾರಣವಿಲ್ಲದೆ ಅಥವಾ ಅನುಮೋದಿತ ರಜೆ ಇಲ್ಲದೆ ಶಾಲೆಗೆ ಗೈರುಹಾಜರಾಗಿದ್ದಕ್ಕಾಗಿ ಜವಾಬ್ದಾರರಾಗಿರುತ್ತಾರೆ.

ಜಿ. **ಪ್ರತಿಯೊಬ್ಬ ಮುಖ್ಯ ಶಿಕ್ಷಕರು ಮತ್ತು / ಅಥವಾ ಶಾಲಾ ಪ್ರಾಂಶುಪಾಲರು ಸುಭದ್ರವಾದ ಶಾಲಾ ಅಭಿವೃದ್ಧಿ ಪ್ರಕ್ರಿಯೆಗಳು ಮತ್ತು ಪೋಷಕ ಶಾಲಾ ಸಂಸ್ಕೃತಿಯನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.** ಈ ಬಗ್ಗೆ ಶಾಲಾ ನಿರ್ವಹಣಾ ಸಮಿತಿ ಸ್ಪಂದಿಸುವಂತೆ ನೋಡಿಕೊಳ್ಳಲಾಗುತ್ತದೆ ಮತ್ತು ಶಾಲಾ ಶಿಕ್ಷಣ ನಿರ್ದೇಶನಾಲಯವನ್ನು ಶಾಲಾ ಬೆಳವಣಿಗೆ ಮತ್ತು ಪೂರಕ ಸಂಸ್ಕೃತಿಗೆ ನೆರವಾಗುವಂತೆ ಪುನರ್ರಚಿಸಲಾಗುತ್ತದೆ.

**ಎಚ್.** ಎಲ್ಲಾ ವಿದ್ಯಾರ್ಥಿಗಳನ್ನು ಸೇರ್ಪಡೆಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಶಿಕ್ಷಕರು ಮತ್ತು ಶಿಕ್ಷಕ ಶಿಕ್ಷಕರಿಗೆ ಭಾರತೀಯ ಭಾಷೆಗಳಲ್ಲಿ ಅತ್ಯುತ್ತಮ ಗುಣಮಟ್ಟದ ಸಾಮಗ್ರಿಗಳನ್ನು ನೀಡಲು ಆದ್ಯತೆ ನೀಡಲಾಗುತ್ತದೆ.

ಐ. ಅಸ್ತಿತ್ವದಲ್ಲಿರುವ ಎಲ್ಲಾ ಶೈಕ್ಷಣಿಕ ಬೆಂಬಲ ಸಂಸ್ಥೆಗಳನ್ನು ಬಲಪಡಿಸಲು ಎಚ್ಚರಿಕೆಯ ಯೋಜನೆಯೊಂದಿಗೆ **ಶೈಕ್ಷಣಿಕ ಬೆಂಬಲ ಸಂಸ್ಥೆಗಳನ್ನು ಪುನಶ್ಚೇತನಗೊಳಿಸಲು** ಆದ್ಯತೆ ನೀಡಲಾಗುವುದು.

ಜೆ. ಕನಿಷ್ಠ ವರ್ಷಗಳ ಬೋಧನಾ ಅನುಭವದ ನಂತರ ಎಲ್ಲಾ ಶಿಕ್ಷಕರು **ಶಿಕ್ಷಕರ ಶಿಕ್ಷಣ ತರಬೇತಿ ಅಥವಾ ಶೈಕ್ಷಣಿಕ ಆಡಳಿತ ನಡೆಸಲು** ಅರ್ಹರಾಗಿರುತ್ತಾರೆ. ದೀರ್ಘಕಾಲದಲ್ಲಿ ಎಲ್ಲಾ ಶೈಕ್ಷಣಿಕ ಆಡಳಿತ ಹುದ್ದೆಗಳಿಗೆ ಆಡಳಿತದಲ್ಲಿ ಆಸಕ್ತಿ ಇರುವ ಅತ್ಯುತ್ತಮ ಶಿಕ್ಷಕರಿಗೆ ಮೀಸಲಾಗಿಡಲಾಗುತ್ತದೆ.

## 6. ದೇಶದ ಪ್ರತಿ ಮಗುವಿಗೂ ಸಮಾನ ಮತ್ತು ಅಂತರ್ಗತ ಶಿಕ್ಷಣ

ಈ ನೀತಿಯು ಭಾರತದ ಎಲ್ಲಾ ಮಕ್ಕಳಿಗೂ ಅನುಕೂಲಕರವಾದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಗುರಿ ಹೊಂದಿದ್ದು, ಇದರಿಂದಾಗಿ ಯಾವುದೇ ಮಗು ತನ್ನ ಜನ್ಮ ಅಥವಾ ಹಿನ್ನಲೆಯ ಕಾರಣದಿಂದಾಗಿ ಕಲಿಯಲು ಮತ್ತು ಯೋಗ್ಯನಾಗಲು ಯಾವುದೇ ಅವಕಾಶಗಳಿಂದ ವಂಚಿತನಾಗುವುದಿಲ್ಲ.

**ಉದ್ದೇಶ:** ಒಂದು ಅಂತರ್ಗತ ಮತ್ತು ಸಮಾನ ಶಿಕ್ಷಣ ವ್ಯವಸ್ಥೆಯನ್ನು ಸಾಧಿಸುವುದರಿಂದ ಪ್ರತಿಯೊಂದು ಮಗುವಿನ ಕಲಿಕೆಗೆ ಮತ್ತು ಬೆಳವಣಿಗೆಗೆ ಸಮಾನ ಅವಕಾಶಗಳನ್ನು ಒದಗಿಸಿದಂತಾಗುತ್ತದೆ ಹಾಗೂ ಸಹಭಾಗಿತ್ವ ಮತ್ತು ಕಲಿಕೆಯ ಫಲಿತಾಂಶಗಳನ್ನು 2030ರ ವೇಳೆಗೆ ಎಲ್ಲಾ ಲಿಂಗ ಮತ್ತು ಸಾಮಾಜಿಕ ವರ್ಗಗಳಲ್ಲಿ ಸಮಾನಗೊಳಿಸಲಾಗುತ್ತದೆ.

**ಎ.** ಬಾಲ್ಯ ಶಿಕ್ಷಣ, ಮೂಲಭೂತ ಸಾಕ್ಷರತೆ ಮತ್ತು ಗಣಿತಶಾಸ್ತ್ರ, ಶಾಲಾ ಪ್ರವೇಶ, ದಾಖಲಾತಿ ಮತ್ತು ಹಾಜರಾತಿಯು ಕಡಿಮೆ **ಪ್ರಾತಿನಿಧ್ಯ ಹೊಂದಿರುವ ಸಮುದಾಯದ ವಿದ್ಯಾರ್ಥಿಗಳಿಗೆ ಉದ್ದೇಶಿತ ಗಮನ ಮತ್ತು ಬೆಂಬಲ ನೀಡುವಿಕೆಯು ನೀತಿಯ ಕಾರ್ಯಗಳಿಗೆ ಸಂಬಂಧಿಸಿದೆ.**

**ಬಿ.** ದೇಶಾದ್ಯಂತ ಅನಾನುಕೂಲಕರ ಪ್ರದೇಶಗಳಲ್ಲಿ **ವಿಶೇಷ ಶಿಕ್ಷಣ ವಲಯಗಳನ್ನು** ಸ್ಥಾಪಿಸಲಾಗುತ್ತದೆ. ಸ್ಪಷ್ಟ ಸಾಮಾಜಿಕ ಅಭಿವೃದ್ಧಿ ಮತ್ತು ಸಾಮಾಜಿಕ-ಆರ್ಥಿಕ ಸೂಚಕಗಳ ಆಧಾರದ ಮೇಲೆ ಈ ವಲಯಗಳನ್ನು ಘೋಷಿಸುವಂತೆ ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ ಮತ್ತು ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ಖರ್ಚು ಮಾಡುವ ಪ್ರತಿ ರೂಪಾಯಿಗೆ 2:1 ಅನುಪಾತದಲ್ಲಿ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಮೇಲ್ವಿಚಾರಣೆಯೊಂದಿಗೆ ಕಡಿಮೆ ಪಾತಿನಿಧ್ಯ ಹೊಂದಿರುವ ಸಮುದಾಯಗಳನ್ನು ಒಟ್ಟುಗೂಡಿಸಲು ಈ ನೀತಿಯಲ್ಲಿ ಹೇಳಿರುವ ಎಲ್ಲಾ ಪ್ರಮುಖ ಅಂಶಗಳ ಬಗ್ಗೆ ವಲಯಗಳು ಕಾರ್ಯನಿರ್ವಹಿಸುವುದು ಮುಖ್ಯ ಯೋಜನೆಯಾಗಿದೆ.

**ಸಿ.** ಕೆಲವು **ಪ್ರಮುಖ ಉಪಕ್ರಮಗಳೆಂದರೆ, ಶಿಕ್ಷಕರನ್ನು** ನಿರಂತರವಾಗಿ ಸಂವೇದನಾಶೀಲಗೊಳಿಸುವ ಮೂಲಕ ಸಾಮರ್ಥ್ಯವರ್ಧನೆ ಮಾಡುವುದು, ಶೈಕ್ಷಣಿಕವಾಗಿ ಕಡಿಮೆ ಪ್ರತಿನಿಧ್ಯ ಹೊಂದಿರುವ ಸಮುದಾಯಗಳಿಂದ ಶಿಕ್ಷಕರ ನೇಮಕಾತಿಗೆ ಪರ್ಯಾಯ ಮಾರ್ಗಗಳನ್ನು ರಚಿಸುವುದು, ಶೈಕ್ಷಣಿಕವಾಗಿ ಕಡಿಮೆ-ಪ್ರತಿನಿಧ್ಯ ಹೊಂದಿರುವ ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳಲ್ಲಿ **ವಿದ್ಯಾರ್ಥಿ-ಶಿಕ್ಷಕ ಅನುಪಾತವನ್ನು** 25:1ಕ್ಕಿಂತ ಹೆಚ್ಚಾಗದಂತೆ ನಿರ್ಬಂಧಿಸುವುದು, ಕಿರುಕುಳಗಳನ್ನು ಪರಿಹರಿಸುವ ಕಾರ್ಯವಿಧಾನಗಳನ್ನು ರೂಪಿಸುವ ಮೂಲಕ **ಅಂತರ್ಗತ ಶಾಲೆಯ ವಾತಾವರಣ** ಸೃಷ್ಟಿಸುವುದು, ಬೆದರಿಕೆ ಮತ್ತು ಲಿಂಗಾಧಾರಿತ ಹಿಂಸೆ ಮತ್ತು ನಿಷೇದದ ಅಭ್ಯಾಸಗಳನ್ನು ತೊಡೆದುಹಾಕುವುದು ಮತ್ತು ಒಳಗೊಳ್ಳುವಂತೆ **ಪಠ್ಯಕ್ರಮವನ್ನು** ಪರಿಷ್ಕರಿಸುವುದು.

**ಡಿ.** ಪ್ರತಿಯೊಬ್ಬ ವಿದ್ಯಾರ್ಥಿಯ ಅಪ್-ಟು-ಡೇಟ್ ಮಾಹಿತಿಯನ್ನು ನ್ಯಾಷನಲ್ ರೆಪೋಸಿಟರಿ ಆಫ್ ಎಜುಕೇಶನಲ್ ಡೇಟಾದಲ್ಲಿ (National Repository of Educational Data) ನಿರ್ವಹಿಸಲಿದ್ದು, **ದತ್ತಾಂಶ ವಿಶ್ಲೇಷಣೆಯನ್ನು** ಕೇಂದ್ರ ಶೈಕ್ಷಣಿಕ ಅಂಕಿಅಂಶ ವಿಭಾಗವು (Educational Statistics Division) ನೋಡಿಕೊಳ್ಳುತ್ತಿದೆ.

**ಇ.** ವಿದ್ಯಾರ್ಥಿವೇತನ ನೀಡಲು ವಿಶೇಷವಾಗಿ ರಚಿಸಲಾದ ರಾಷ್ಟ್ರೀಯ ನಿಧಿಯ ಮೂಲಕ ನೀತಿಯು **ಪ್ರತಿಯೊಬ್ಬ ವಿದ್ಯಾರ್ಥಿಗೆ ಹಣಕಾಸಿನ ನೆರವು ನೀಡುತ್ತದೆ**, ಕಡಿಮೆ-ಪ್ರಾತಿನಿಧ್ಯ ಹೊಂದಿರುವ ಸಮುದಾಯದ ವಿದ್ಯಾರ್ಥಿಗಳಿಗೆ ಸಂಪನ್ಮೂಲಗಳು ಮತ್ತು ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಜಿಲ್ಲೆಗಳು ಮತ್ತು ಸಂಸ್ಥೆಗಳಿಗೆ ಸೇರ್ಪಡೆ ಮತ್ತು ಪ್ರವೇಶಕ್ಕಾಗಿ ಉದ್ದೇಶಿತ ಹಣ ಮತ್ತು ಬೆಂಬಲ ನೀಡುತ್ತದೆ. ಬೆಂಬಲದ ಪರ್ಯಾಯ ವಿಧಾನಗಳೆಂದರೆ, ನ್ಯಾಷಿನಲ್ ಟ್ಯೂಟರ್ಸ್ ಪ್ರೋಗ್ರಾಮ್ (National Tutors Programme) ಮತ್ತು ರೆಮಿಡಿಯಲ್ ಇನ್ಸ್ಟ್ರಕ್ಷನ್ ಏಡ್ಸ್ ಪ್ರೋಗ್ರಾಮ್‌ಗೆ (Remedial Instructional Aides Programme) ನೇಮಕಾತಿ, ಉಪಹಾರ, ಮಧ್ಯಾನದ ಊಟ ಮತ್ತು ವಿಶೇಷ ಇಂಟರ್ನ್‌ಶಿಪ್ ಅವಕಾಶಗಳು. **ಅಂತರ್ಗತ ಶಿಕ್ಷಣದ ಸಂಶೋಧನೆಗಾಗಿ** ಧನಸಹಾಯ ಸಹ ಮಾಡಲಾಗುತ್ತದೆ.

**ಎಫ್.** ಶಾಲಾ ಶಿಕ್ಷಕರು ಮತ್ತು ಹೆಣ್ಣುಮಕ್ಕಳ ನಡುವಿನ **ಲಿಂಗ ಅಸಮತೋಲನವನ್ನು** ಪರಿಹರಿಸಲು ಮಹಿಳೆಯರ ಭಾಗವಹಿಸುವಿಕೆ ಮತ್ತು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವಿಕೆ, **ಬುಡಕಟ್ಟು, ಜಾತಿ ಮತ್ತು ಧರ್ಮ ಆಧಾರಿತ ಗುಂಪುಗಳ** ಮಕ್ಕಳ ಶಿಕ್ಷಣಕ್ಕಾಗಿ ಮೀಸಲಿಟ್ಟ ಎಲ್ಲಾ ಪ್ರಯೋಜನಗಳನ್ನು ಅವರು ಪಡೆಯುವುದನ್ನು ಖಚಿತಪಡಿಸಿಕೊಳ್ಳುವಿಕೆ, **ನಗರದ ಬಡ ಕುಟುಂಬಗಳ** ಮಕ್ಕಳು ಜೀವನ ಸಾಗಿಸುವುದನ್ನು ಕಲಿಯಲು ಸಹಾಯ ಮಾಡುವ ಸಲುವಾಗಿ ಆ ಮಕ್ಕಳಿಗೆ ಶಿಕ್ಷಣ ನೀಡುವಿಕೆ, **ವಿಶೇಷ ಕಾಳಜಿಯ** ಅಗತ್ಯವಿರುವ ಮಕ್ಕಳು ಮತ್ತು **ತೃತಿಯ ಲಿಂಗಿ ಮಕ್ಕಳಿಗೆ** ಶಿಕ್ಷಣ ನೀಡುತ್ತಾ, ನೆರೆಹೊರೆಯ ಶಾಲೆಗಳ ಮುಖ್ಯವಾಹಿನಿಯ ಮಕ್ಕಳ ಅಡಿಪಾಯದ ಹಂತದಿಂದ 12ನೇ ತರಗತಿಯವರೆಗಿನ ಶಿಕ್ಷಣಕ್ಕೆ ನಿರಂತರ ಮತ್ತು ನವೀಕೃತ ಗಮನವನ್ನು ನೀಡುವ ವಿವರಣಾತ್ಮಕ ಮಧ್ಯಸ್ಥಿಕೆಗಳು ಈ ನೀತಿಯಲಿವೆ

## 7. ಶಾಲಾ ಸಂಕೀರ್ಣಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಆಡಳಿತ

**ಉದ್ದೇಶ:** ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಮತ್ತು ಶಾಲಾ ಆಡಳಿತವನ್ನು ಹೆಚ್ಚು ಸ್ಥಳೀಯವಾಗಿ, ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನೀಡಲು ಶಾಲೆಗಳನ್ನು ಶಾಲಾ ಸಂಕೀರ್ಣಗಳಾಗಿ ಗುಂಪು ಮಾಡಲಾಗಿದೆ.

ಶಾಲಾ ಸಂಕೀರ್ಣಗಳ ಸ್ಥಾಪನೆಯಿಂದ ಸಾರ್ವಜನಿಕ ಶಾಲೆಗಳು, ಅದರಲ್ಲೂ ವಿಶೇಷವಾಗಿ ಸಣ್ಣ ಶಾಲೆಗಳು ಪ್ರಸ್ತುತ ಎದುರಿಸುತ್ತಿರುವ ಅನೇಕ ಸಂಪನ್ಮೂಲ ಬಿಕ್ಕಟ್ಟಿನ ಸಮಸ್ಯೆಗಳನ್ನು ತಗ್ಗಿಸಲು ಸಹಾಯವಾಗುತ್ತದೆ. ಹಲವಾರು ಸಾರ್ವಜನಿಕ ಶಾಲೆಗಳನ್ನು ಒಂದೇ ಸಾಂಸ್ಥಿಕ ಮತ್ತು ಆಡಳಿತ ಘಟಕದಡಿಯಲ್ಲಿ ಸೇರಿಸಲಾಗುವುದು. ಶಾಲೆಗಳನ್ನು ಭೌತಿಕವಾಗಿ ಸ್ಥಳಾಂತರಗೊಳಿಸುವ ಅಗತ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಅಡೆತಡೆಗಳನ್ನು ರಾಜಿ ಮಾಡಿಕೊಳ್ಳದೆ ಪರಿಣಾಮಕಾರಿ ಆಡಳಿತಾತ್ಮಕ ಘಟಕಗಳನ್ನು ಸ್ಥಾಪಿಸಲು ಇದು ನೆರವಾಗುತ್ತದೆ.

**ಎ.** 2023ರ ವೇಳೆಗೆ ಜನಸಂಖ್ಯಾ ಹಂಚಿಕೆ, ಸಂಪರ್ಕ ಮತ್ತು ಇತರ ಸ್ಥಳೀಯ ಪರಿಗಣನೆಗಳ ಪ್ರಕಾರ ರಾಜ್ಯ ಸರ್ಕಾರವು **ಶಾಲೆಗಳನ್ನು ಸಂಕೀರ್ಣಗಳಾಗಿ ಒಟ್ಟಾಗಿಸುತ್ತದೆ**. ಈ ಒಟ್ಟಾಗಿಸುವ ಕಾರ್ಯವು ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳ ವಿಮರ್ಶೆ ಮತ್ತು ಬಲವರ್ಧನೆಯನ್ನು ಸಹ ಒಳಗೊಂಡಿರುತ್ತದೆ (ಉದಾ, <20 ವಿದ್ಯಾರ್ಥಿಗಳು). ಇದೇ ಸಮಯದಲ್ಲಿ ಸಾರಿಗೆ ಸೌಕರ್ಯ ಒದಗಿಸುವ ಕ್ರಮಗಳ ಮೂಲಕ ಪ್ರವೇಶ ಪ್ರಕ್ರಿಯೆಯ ಮೇಲೆ ಪರಿಣಾಮ ಉಂಟಾಗಂತೆ ನೋಡಿಕೊಳ್ಳಲಾಗುತ್ತದೆ. ಅಸ್ಥಿತ್ವದಲ್ಲಿರುವ ಶಾಲೆಗಳ ಸ್ಥಿತಿಗತಿಗಳನ್ನು ನಿರ್ಣಯಿಸಲು ರಾಜ್ಯ ಸರ್ಕಾರಕ್ಕೆ ಇದೊಂದು ಅವಕಾಶವನ್ನು ಸಹ ಒದಗಿಸುತ್ತದೆ.

**ಬಿ.** ಶಾಲಾ ಸಂಕೀರ್ಣಗಳು ಸಣ್ಣ ಶಾಲೆಗಳ ಪ್ರತ್ಯೇಕತೆಯನ್ನು ತೊಡೆದುಹಾಕುತ್ತದೆ ಮತ್ತು **ಶಿಕ್ಷಕರು ಹಾಗೂ ಪ್ರಾಂಶುಪಾಲರು ನಡುವೆ ಸಮುದಾಯವೇರ್ಪಡುತ್ತದೆ,** ಇದರಿಂದ ಅವರು ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಒಟ್ಟಾಗಿ ಕೆಲಸ ಮಾಡಬಹುದು ಹಾಗೂ ಪರಸ್ಪರರನ್ನು ಬೆಂಬಲಿಸಬಹುದು. ಶಾಲಾ ಸಂಕೀಣವು ಸಾರ್ವಜನಿಕ ಶಾಲಾ ವ್ಯವಸ್ಥೆಯ ಪ್ರಮುಖ ಆಡಳಿತ ಘಟಕವಾಗಿರುತ್ತದೆ.

**ಸಿ.** ಒಂದು ಶಾಲಾ ಸಂಕೀರ್ಣವು ಸರಿಸುಮಾರು 10-20 ಸಾರ್ವಾಜನಿಕ ಶಾಲೆಗಳ ಗುಂಪನ್ನು ಒಳಗೊಂಡಿದ್ದು ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೆ ಸಂಪರ್ಕಿತ/ಹೊಂದಿಕೊಂಡಿರುವ ಭೌಗೋಳಿಕ ಪ್ರದೇಶದೊಳಗೆ ಶಿಕ್ಷಣವನ್ನು ನೀಡುತ್ತದೆ. ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರು ಈ ಶಾಲಾ ಸಂಕೀರ್ಣದ ಮುಖ್ಯಸ್ಥರಾಗಿರುತ್ತಾರೆ.

**ಡಿ.** ಪ್ರತಿಯೊಂದು ಶಾಲಾ ಸಂಕೀರ್ಣವು **ಅರೆ-ಸ್ವಾಯತ್ತ ಘಟಕವಾಗಿದ್ದು**, ಅದು ಪ್ರಾಥಮಿಕ ಹಂತದಿಂದ ಹಿಡಿದು 12ನೇ ತರಗತಿಯರವರೆಗೂ ಶಿಕ್ಷಣ ನೀಡಲಿದ್ದು ಇದು ಒಂದು ಪ್ರೌಢಶಾಲೆಯನ್ನು (9-12ನೇ ತರಗತಿ) ಮತ್ತು ತನ್ನ ನೆರೆಹೊರೆಯಲ್ಲಿ ಮೂಲ/ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ನೀಡುವ ಎಲ್ಲಾ ಸಾರ್ವಜನಿಕ ಶಾಲೆಗಳು ಹೊಂದಿರಲಿದೆ.

**ಇ.** ಶಾಲೆಗಳನ್ನು ಶಾಲಾ ಸಂಕೀರ್ಣಗಳಾಗಿ ಗುಂಪಾಗಿಸುವುದರಿಂದ ವಿಷಯವಾರು ಶಿಕ್ಷರು, ಕ್ರೀಡೆ, ಸಂಗೀತ ಮತ್ತು ಕಲಾ ಶಿಕ್ಷಕರು, ಸಲಹೆಗಾರರು ಮತ್ತು ಸಮಾಜಿಕ ಕಾರ್ಯಕರ್ತರು ಸೇರಿದಂತೆ ಎಲ್ಲರೂ **ಶಾಲೆಗಳಾದ್ಯಂತ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡುತ್ತದೆ.** ಇದು ಭೌತಿಕ ಸಂಪನ್ಮೂಲಗಳಾದ ಪ್ರಯೋಗಾಲಯಗಳು, ಗ್ರಂಥಾಲಯಗಳು, ಐಸಿಟಿ ಸಾಧನ, ಸಂಗೀತ ಸಾಧನಗಳು, ಕ್ರೀಡಾ ಸಲಕರಣೆಗಳು, ಆಟದ ಮೈದಾನ, ಇತ್ಯಾದಿಗಳನ್ನು ಸಂಘಟಿತ ರೀತಿಯಲ್ಲಿ ಹಂಚಿಕೊಂಡು ಸಾರ್ವಜನಿಕ ಸಂಪನ್ಮೂಲಗಳ ಸೌಲಭ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಲು ಅವಕಾಶ ಒದಗಿಸುತ್ತದೆ.

**ಎಫ್.** ಶಾಲೆಗಳಲ್ಲಿ ನೀಡುವ ಮೊದಲ ಮೂರು ವರ್ಷಗಳ ಮೂಲಭೂತ ಶಿಕ್ಷಣವು ಸೇರಿದಂತೆ, ವೃತ್ತಿ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣವನ್ನು ನೀಡುವ ಸಂಸ್ಥೆಗಳು, ಶಿಕ್ಷಕರನ್ನು ಬೆಂಬಲಿಸುವ ಸಂಸ್ಥೆಗಳು ಮತ್ತು ಉತ್ತಮ ಸಂಪರ್ಕ ಹೊಂದಿರುವ ಭೌಗೋಳಿಕ ಪ್ರದೇಶದೊಳಗೆ ವಿಶೇಷ ಅಗತ್ಯತೆ ಹೊಂದಿರುವ ಮಕ್ಕಳನ್ನು ಪ್ರೋತ್ಸಾಹಿಸುವುದು ಮತ್ತು ಅವರವರ ಕೆಲಸ-ಕಾರ್ಯಗಳಲ್ಲಿ ಪರಸ್ಪರರನ್ನು ಬೆಂಬಲಿಸುವುದನ್ನು ಒಳಗೊಂಡಂತೆ **ಸಮಂಜಸವಾದ ಶೈಕ್ಷಣಿಕ ಸೌಲಭ್ಯಗಳನ್ನು** ಸೃಷ್ಟಿಸುವುದೇ ಇದರ ಗುರಿಯಾಗಿದೆ. ಜಿಲ್ಲೆಯ ಉನ್ನತ ಶಿಕ್ಷಣ ಸಂಸ್ಥೆಯು ಸಹ ಬೆಂಬಲ ನೀಡುತ್ತದೆ (ಉದಾ, ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಬೆಂಬಲ ನೀಡುವುದು).

**ಜಿ.** ಪ್ರತಿಯೊಂದು ಸಂಕೀರ್ಣಕ್ಕೂ ಸಮಗ್ರ **ಶಿಕ್ಷಕರ ಅಭಿವೃದ್ಧಿ ಯೋಜನೆಯನ್ನು** ರೂಪಿಸಲಾಗುವುದು ಮತ್ತು ಸಾಪ್ತಾಹಿಕ ಸಭೆಗಳು ಮತ್ತು ಶಿಕ್ಷಕರ ಕಲಿಕಾ ಕೇಂದ್ರಗಳಂತಹ ಪ್ರಕ್ರಿಯೆಗಳ ಮೂಲಕ ವರಿಷ್ಠರ ಕಲಿಕಾ ಸಮುದಾಯಗಳನ್ನು ಪ್ರಜ್ಞಾಪೂರ್ವಕವಾಗಿ ಅಭಿವೃದ್ಧಿಪಡಿಸಲಾಗುದು ಮತ್ತು ಪೋಷಿಸಲಾಗುವುದು. ಇದಲ್ಲದೇ ವಿಚಾರಸಂಕಿರಣಗಳು, ಇನ್-ಕ್ಲಾಸ್ ಮಾರ್ಗದರ್ಶನ, ಒಗ್ಗಿಕೊಳ್ಳಲು ಭೇಟಿಗಳು ಮುಂತಾದ ಮುಂದುವರೆದ ವೃತ್ತಿಪರ ಅಭಿವೃದ್ಧಿಯ ಇತರ ವಿಧಾನಗಳನ್ನು ಒದಗಿಸಲಾಗುತ್ತದೆ. ಶೈಕ್ಷಣಿಕ ಮತ್ತು ಶಿಕ್ಷಕರ ಬೆಂಬಲ ವ್ಯವಸ್ಥೆಯ ಜತೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಹಾಗೂ ಘಟಕ (ಬ್ಲಾಕ್) ಮತ್ತು ಸಮೂಹ (ಕ್ಲಸ್ಟರ್) ಸಂಪನ್ಮೂಲ ಕೇಂದ್ರಗಳನ್ನು ಶಾಲಾ ಸಂಕೀರ್ಣ ವ್ಯವಸ್ಥೆಯೊಂದಿಗೆ ಜೋಡಿಸಲಾಗುತ್ತದೆ.

**ಎಚ್.** ಪ್ರತಿ ಶಾಲಾ ಸಂಕೀರ್ಣಕ್ಕೆ **ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿಯೊಂದಿದ್ದು,** ಸಂಕೀರ್ಣದಲ್ಲಿರುವ ಎಲ್ಲಾ ಶಾಲೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವುದರ ಜೊತೆಗೆ ವಯಸ್ಕರ ಶಕ್ಷಣ ಕೇಂದ್ರ, ಸಮೂಹ ಸಂಪನ್ಮೂಲ ಕೇಂದ್ರ ಮುಂತಾದ ಅನೇಕ ಇತರ ಕೇಂದ್ರಗಳು ಸಂಕೀರ್ಣಕ್ಕೆ ಸೇರಿಕೊಳ್ಳಲಿವೆ. ಶಾಲೆಯ ಪರವಾಗಿ ಮಧ್ಯಪ್ರವೇಶಿಸಿ ರಾಜ್ಯ ಮತ್ತು ಅದರ ಸಂಸ್ಥೆಗಳೊಂದಿಗೆ ಮಾತನಾಡಲು ಸಮಿತಿಗೆ ಅಧಿಕಾರ ನೀಡಲಾಗುತ್ತದೆ. ಇದು ಶಿಕ್ಷಕರ ಕಾರ್ಯಕ್ಷಮತೆಯ ನಿರ್ವಾಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ಐ.** ಪ್ರತಿ ಶಾಲೆಯೂ ತಮ್ಮ ಯೋಜನೆಗಳನ್ನು ಅಭಿವೃದ್ಧಿಪಡಿಸಿ, ಇದನ್ನು ಶಾಲಾ ಸಂಕೀರ್ಣದ ಯೋಜನೆಯನ್ನು ವಿಕಸಿಸಲು ಬಳಸಲಾಗುತ್ತದೆ, ಹಾಗೆಯೇ ಇದನ್ನು ಶಾಲಾ ಶಿಕ್ಷಣ ಇಲಾಖೆಯು ಅನುಮೋದಿಸುತ್ತದೆ. ಶಾಲಾ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ಅವುಗಳ ಕಾರ್ಯನಿರ್ವಹಣೆ ಹಾಗೂ ಸಬಲೀಕರಣವನ್ನು ಸಕ್ರೀಯಗೊಳಿಸುವ ಸಲುವಾಗಿ ಪ್ರತಿ **ಜಿಲ್ಲೆಯು ಜಿಲ್ಲಾ ಶಿಕ್ಷಣ ಸಮಿತಿ / ಜಿಲ್ಲಾ ಶಿಕ್ಷಣ ಪರಿಷತ್** ಹೊಂದಿರುತ್ತದೆ.

## 8. ಶಾಲಾ ಶಿಕ್ಷಣದ ನಿಯಂತ್ರಣ

**ಉದ್ದೇಶ:** ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಪರಿಣಾಮಕಾರಿ ನಿಯಂತ್ರಣ ಮತ್ತು ಮಾನ್ಯತಾ ಕಾರ್ಯವಿಧಾನಗಳ ಮೂಲಕ ಉತ್ತೇಜಿಸಲಾಗುತ್ತದೆ ಮತ್ತು ಅದರ ಸಮಗ್ರತೆ ಹಾಗೂ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಶೈಕ್ಷಣಿಕ ಫಲಿತಾಂಶವನ್ನು ನಿರಂತರವಾಗಿ ಸುಧಾರಿಸಲು ಗುಣಮಟ್ಟ ಮತ್ತು ನಾವಿನ್ಯತೆಯನ್ನು ಪ್ರೋತ್ಸಾಹಿಸಲಾಗುತ್ತದೆ.

ನಿಯಂತ್ರಣವು ಶೈಕ್ಷಣಿಕ ಸುಧಾರಣೆಯ ಪ್ರಮುಖ ಸಾಧನವಾಗಬೇಕು ಮತ್ತು ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಗೊಳಿಸಬೇಕು.

**ಎ.** ಹಿತಾಸಕ್ತಿಯ ಘರ್ಷಣೆಗಳನ್ನು ತೊಡೆದುಹಾಕಲು ಶಾಲೆಗಳ ನಿಯಂತ್ರಣ ಮತ್ತು ಕಾರ್ಯಾಚರಣೆಗಳನ್ನು (ಸೇವಾ ಅವಕಾಶ) ಪ್ರತ್ಯೇಕ ಸಂಸ್ಥೆಗಳು ನೋಡಿಕೊಳ್ಳುತ್ತವೆ. **ನೀತಿಯನ್ನು ಸಿದ್ಧಪಡಿಸಲು, ನಿಯಂತ್ರಿಸಲು, ಕಾರ್ಯನಿರ್ವಹಿಸಲು ಮತ್ತು ಶೈಕ್ಷಣಿಕ ವಿಷಯಗಳಿಗೆ ಸ್ಪಷ್ಟವಾದ ಪ್ರತ್ಯೇಕ ವ್ಯವಸ್ಥೆಗಳು** ಇರುತ್ತವೆ.

**ಬಿ.** ಅರೆ-ನ್ಯಾಯಾಂಗ ಸ್ಥಾನ ಹೊಂದಿರುವ **ರಾಜ್ಯ ಶಾಲಾ ನಿಯಂತ್ರಣ ಪ್ರಾಧಿಕಾರ (State School Regulatory Authority)** ಎಂಬ ಸ್ವತಂತ್ರ ರಾಜ್ಯವ್ಯಾಪಿ ನಿಯಂತ್ರಕ ಸಂಸ್ಥೆಯನ್ನು ಪ್ರತಿ ರಾಜ್ಯದಲ್ಲೂ ರಚಿಸಲಾಗುತ್ತದೆ. ಇಡೀ ರಾಜ್ಯದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಕಾರ್ಯಾಚರಣೆಯನ್ನು ಶಾಲಾ ಶಿಕ್ಷಣ ನಿರ್ದೇಶನಾಲಯ (Directorate of School Education) ನೋಡಿಕೊಳ್ಳುತ್ತದೆ.

**ಸಿ.** ಶಾಲಾ ಗುಣಮಟ್ಟದ ಮೌಲ್ಯಮಾಪನ ಮತ್ತು ಮಾನ್ಯತೆಯ ಚೌಕಟ್ಟಿನೊಳಗೆ **ಮಾನ್ಯತೆಯ ವ್ಯವಸ್ಥೆಯನ್ನು ಆಧರಿಸಿದ ನಿಯಂತ್ರಣವಿರುತ್ತದೆ**. ಈ ಚೌಕಟ್ಟು ಕೇವಲ ಮೂಲ ನಿಯತಾಂಕಗಳನ್ನು ಮಾತ್ರ ಪರಿಹರಿಸುತ್ತದೆ ಮತ್ತು ಇದಕ್ಕೆ ಪ್ರತಿಯಾಗಿ ಶಾಲೆಯನ್ನು ಆರಂಭಿಸಲು ಪರವಾನಗಿ ತಿಳಿಸುತ್ತದೆ. ಶಾಲೆಗಳು ಸ್ವಯಂ ಮಾನ್ಯತೆ ನೀಡಿದರೆ, ಲೆಕ್ಕ ಪರಿಶೋಧನೆಯ ಕಾರ್ಯವಿಧಾನವನ್ನು ಸ್ಥಾಪಿಸಲಾಗುತ್ತದೆ. ಈ ಪ್ರಕ್ರಿಯೆಯು ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡಕ್ಕೂ ಅನ್ವಯಿಸುತ್ತದೆ.

**ಡಿ.** ಪ್ರಸ್ತುತ ಪರಿಶೀಲನಾ ವಿಧಾನದಿಂದ ನಿಯಂತ್ರಣವನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ; ಇದಕ್ಕೆ ಬದಲಾಗಿ ಶಾಲೆಗಳಿಗೆ ಸಂಬಂಧಿಸಿದ ಎಲ್ಲಾ ಮುಖ್ಯವಾದ ಮಾಹಿತಿಯು ಸಾರ್ವಜನಿಕ ವಲಯದಲ್ಲಿರುವುದರಿಂದ **ಪೋಷಕರು ವಾಸ್ತವಿಕ ನಿಯಂತ್ರಕರಾಗಿರುತ್ತಾರೆ**.

**ಇ.** ಶೈಕ್ಷಣಿಕ ವಿಷಯಗಳೂ ಸೇರಿದಂತೆ ರಾಜ್ಯದಲ್ಲಿ ಮಾನದಂಡಗಳನ್ನು ನಿಗದಿಪಡಿಸುವಿಕೆ ಮತ್ತು ಪಠ್ಯಕ್ರಮವನ್ನು ರಾಜ್ಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಸಮಿತಿ (State Council of Educational Research and Training) ಮುನ್ನಡೆಸಲಿದೆ. ಶಾಲೆ ಬಿಡುವ ಹಂತದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯದ ಪ್ರಮಾಣೀಕರಣವನ್ನು ರಾಜ್ಯದ ಪ್ರಮಾಣೀಕರಣ/ಪರೀಕ್ಷಾ ಮಂಡಳಿಗಳು ನಿರ್ವಹಿಸುತ್ತದೆ, ಈ ಉದ್ದೇಶಕ್ಕಾಗಿ ಅರ್ಥಪೂರ್ಣ ಪರೀಕ್ಷೆಯನ್ನು ನಡೆಸಲಾಗುತ್ತದೆ; ಆದರೂ ಪಠ್ಯಕ್ರಮ ನಿರ್ಧರಿಸುವಲ್ಲಿ (ಪಠ್ಯ ಪುಸ್ತಕಗಳನ್ನು ಒಳಗೊಂಡಂತೆ) ಅವರ ಪಾತ್ರವಿರುವುದಿಲ್ಲ.

**ಎಫ್.** **ಖಾಸಗಿ ಜನಪರ ಶಾಲೆಗಳನ್ನು** ಪ್ರೋತ್ಸಾಹಿಸಬೇಕು ಮತ್ತು ನಿಯಂತ್ರಣದ ಹೆಚ್ಚಿನ ಒತ್ತಡಗಳಿಂದ ಮುಕ್ತಗೊಳಿಸಬೇಕು; ಇದೇ ಸಮಯದಲ್ಲಿ ಶಾಲೆಯನ್ನು ವಾಣಿಜ್ಯ ಉದ್ಯಮವನ್ನಾಗಿ ನಡೆಸಲು ಯತ್ನಿಸುವ ಖಾಸಗಿ ನಿರ್ವಾಹಕರನ್ನು ತಡೆಯಬೇಕಾಗುತ್ತದೆ.

**ಜಿ.** **ಸಾರ್ಜನಿಕ ಮತ್ತು ಖಾಸಗಿ ಶಾಲೆಗಳನ್ನು ಒಂದೇ ಮಾನದಂಡ** ಮತ್ತು ಪ್ರಕ್ರಿಯೆಗಳಡಿಯಲ್ಲಿ **ನಿಯಂತ್ರಿಸಲಾಗುತ್ತದೆ**; ಇದರ ಮೂಲಕ ಖಾಸಗಿ ಜನಪರ ಉಪಕ್ರಮಗಳೊಂದಿಗೆ ಸಾರ್ವಜನಿಕ ಹಿತಾಸಕ್ತಿಯ ಖಾಸಗಿ ಶಾಲೆಗಳನ್ನು ಪ್ರೋತ್ಸಾಹಿಸುವದನ್ನು ಖಾತರಿಪಡಿಸಲಾಗುತ್ತದೆ.

**ಎಚ್.** ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿಯು (State Council of Educational Research and Training) ಪ್ರತಿ ರಾಜ್ಯದ **ಶಾಲೆಯ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆಯ ಚೌಕಟ್ಟನ್ನು** ಅಭಿವೃದ್ಧಿಪಡಿಸುತ್ತದೆ. ಇದನ್ನು ರಾಜ್ಯ ಶಾಲಾ ನಿಯಂತ್ರಣ ಪ್ರಾಧಿಕಾರವು (State School Regulatory Authority) ಮಾನ್ಯತೆ ನೀಡುವ ವ್ಯವಸ್ಥೆಯನ್ನು ಆಧರಿಸಿ ಶಾಲೆಗಳ ನಿಯಂತ್ರಣಕ್ಕಾಗಿ ಬಳಸುತ್ತದೆ.

**ಐ.** ಶಾಲೆಗಳು ಮತ್ತು ಶಾಲಾ ವ್ಯವಸ್ಥೆಗಳು ಪಠ್ಯಕ್ರಮವನ್ನು ಆಯ್ಕೆಮಾಡುವ ನಮ್ಯತೆಯನ್ನು ಹೊಂದಿರುತ್ತದೆ. ಇದನ್ನು ರಾಷ್ಟ್ರೀಯ/ರಾಜ್ಯ ಪಠ್ಯಕ್ರಮದ ಚೌಕಟ್ಟು/ಗಳೊಂದಿಗೆ ಹೊಂದಿಸಬೇಕು.

**ಜೆ.** ಎಲ್ಲಾ ಸಂಸ್ಥೆಗಳು ವಾರ್ಷಿಕ ಮತ್ತು ಮಧ್ಯಕಾಲೀನ (3-5) ಯೋಜನೆಗಳನ್ನು ಅಭಿವೃದ್ಧಿಪಡಿಸುತ್ತವೆ. ಅದಕ್ಕೆ ಅನುಗುಣವಾಗಿ ಅತ್ಯುನ್ನತ ಆಡಳಿತ ಸಂಸ್ಥೆಯ ವ್ಯವಸ್ಥಿತ ಪರಿಶೀಲನಾ ಪ್ರಕ್ರಿಯೆಯನ್ನು ಜಾರಿಗೆ ತರುತ್ತದೆ.

**ಕೆ.** ವಿದ್ಯಾರ್ಥಿಯ ಕಲಿಕಾ ಮಟ್ಟದ ಮಾದರಿ ಆಧಾರಿತ **ರಾಷ್ಟ್ರೀಯ ಸಾಧನೆ ಸಮೀಕ್ಷೆಯನ್ನು (National Achievement Survey)** ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿಯು

ಮುಂದುವರೆಸಿಕೊಂಡು ಹೋಗುತ್ತದೆ. ಗಣತಿ ಆಧಾರಿತ ರಾಜ್ಯ ಮೌಲ್ಯಮಾಪನ ಸಮೀಕ್ಷೆಯನ್ನು ರಾಜ್ಯಗಳು ಮುಂದುವರೆಸಿಕೊಂಡು ಹೋಗಬಹುದು.

**ಎಲ್. ಶಿಕ್ಷಣದ ಹಕ್ಕು** ಶಾಲಾ ನಿಯಂತ್ರಣ ಮತ್ತು ಆಡಳಿತಕ್ಕಾಗಿ ಶಾಸನಬದ್ಧ ಕೇಂದ್ರವಾಗಿರುವುದರಿಂದ ಇದನ್ನು **ಪರಿಶೀಲಿಸಲಾಗುತ್ತದೆ** ಮತ್ತು ಈ ನೀತಿಯನ್ನು **ಸಕ್ರೀಯಗೊಳಿಸಲು ಸೂಕ್ತವಾದ ಮಾರ್ಪಾಡುಗಳನ್ನು** ಮಾಡಲಾಗುತ್ತದೆ, ಅಂತೆಯೇ ಇದು ಜಾರಿಗೆ ಬಂದಾಗಿನಿಂದ ಕಲಿಕೆಯ ಆಧಾರದ ಮೇಲೆ ಸುಧಾರಣೆಗಳನ್ನು ಸೇರಿಸುತ್ತದೆ.

# ಉನ್ನತ ಶಿಕ್ಷಣ

## 1. ಹೊಸಬಗೆಯ ಸಾಂಸ್ಥಿಕ ರಚನಾವಿನ್ಯಾಸ

**ಉದ್ದೇಶ:** ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿ ದೇಶಾದ್ಯಂತ ವಿಶ್ವಮಟ್ಟದ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದು - 2035ರ ವೇಳೆಗೆ ಒಟ್ಟಾರೆ ಶಿಕ್ಷಣ ಪ್ರವೇಶಾತಿಯ ಪ್ರಮಾಣವನ್ನು ಕನಿಷ್ಠ ಶೇಕಡಾ 50ಕ್ಕೆ ಹೆಚ್ಚಿಸುವುದು.

ಉನ್ನತ ಶಿಕ್ಷಣಕ್ಕಾಗಿ ಬೃಹತ್ ಪ್ರಮಾಣದ, ಉತ್ತಮ ಸಂಪನ್ಮೂಲಗಳಿಂದೊಡಗೂಡಿದ, ಸಕ್ರಿಯವಾದ ಬಹುಶಿಸ್ತೀಯ ಅಧ್ಯಯನಗಳನ್ನು ನಡೆಸಲು ಅವಕಾಶ ಒದಗಿಸುವ ಸಂಸ್ಥೆಗಳನ್ನು ಸ್ಥಾಪನೆ ಮಾಡಲು ಒಂದು ಹೊಸ ದೃಷ್ಟಿಕೋನವುಳ್ಳ ಮತ್ತು ಹೊಸ ವಿನ್ಯಾಸವುಳ್ಳ ವ್ಯವಸ್ಥೆಯನ್ನು ರೂಪಿಸಲು ಪರಿಕಲ್ಪಿಸಲಾಗಿದೆ. ಹಾಲಿ ಇರುವ 800 ವಿಶ್ವವಿದ್ಯಾನಿಲಯಗಳನ್ನು ಹಾಗೂ 40,000 ಕಾಲೇಜುಗಳನ್ನು ಕ್ರೋಡೀಕರಿಸಿ ಸುಮಾರು 15,000 ಶ್ರೇಷ್ಠಮಟ್ಟದ ಸಂಸ್ಥೆಗಳನ್ನಾಗಿ ರೂಪಿಸಲಾಗುತ್ತದೆ.

ಎ. ಬೋಧನೆ ಮತ್ತು ಸಂಶೋಧನೆಗಳನ್ನು ನಡೆಸುವ ಸಲುವಾಗಿ ಬೃಹತ್ತಾದ, **ಉತ್ತಮ ಸಂಪನ್ಮೂಲ ಸೌಲಭ್ಯಗಳುಳ್ಳ ಹಾಗೂ ಸ್ವಾಯತ್ತವಾದ ಬಹುಶಿಸ್ತೀಯ ಅಧ್ಯಯನಗಳಿಗೆ** ಅವಕಾಶ ಒದಗಿಸುವ ಸಂಸ್ಥೆಗಳನ್ನು ಉನ್ನತ ಶಿಕ್ಷಣದ ಈ ಹೊಸ ರಚನಾವಿನ್ಯಾಸದ ಅಡಿಯಲ್ಲಿ ರೂಪಿಸಲಾಗುತ್ತದೆ. ಬಲಿಷ್ಠ ಶೈಕ್ಷಣಿಕ ಸಮುದಾಯಗಳನ್ನು ನಿರ್ಮಿಸುವುದರೊಂದಿಗೆ ಈ ಸಂಸ್ಥೆಗಳು ನಿರಂತರವಾಗಿ ತಮ್ಮ ವಿಸ್ತಾರ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತವೆ. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳೂ, ವಿಭಾಗಗಳು ಮತ್ತು ವಿಷಯಗಳಲ್ಲಿಯೂ ಬೋಧನಾ ಕಾರ್ಯಕ್ರಮಗಳೊಂದಿಗೆ ಬಹುಶಿಸ್ತೀಯ ಸಂಸ್ಥೆಗಳಾಗುತ್ತವೆ.

ಬಿ. ವಿವಿಧ ಬಗೆಯ ಗುರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು **ಈ ಸಂಸ್ಥೆಗಳನ್ನು ಮೂರು ವಿಧವಾಗಿ ವಿಂಗಡಿಸಲಾಗಿದ್ದು,** ಇವೆಲ್ಲವೂ ಉತ್ತಮ ಗುಣಮಟ್ಟವನ್ನು ಹೊಂದಿರುತ್ತವೆ.

- **ವಿಧ 1:** ಎಲ್ಲಾ ವಿಷಯಗಳಿಗೂ ಸಂಬಂಧಪಟ್ಟಂತೆ ಜಾಗತಿಕ ಮಟ್ಟದ ಸಂಶೋಧನೆ ಮತ್ತು ಉತ್ತಮ ಗುಣಮಟ್ಟದ ಬೋಧನೆಗೆ ಒತ್ತು ನೀಡುತ್ತದೆ.
- **ವಿಧ 2:** ಎಲ್ಲಾ ವಿಷಯಗಳ ಸಂಶೋಧನೆಗೆ ಗಮನಾರ್ಹ ಕೊಡುಗೆ ನೀಡುವುದರೊಂದಿಗೆ ಉನ್ನತಮಟ್ಟದ ಬೋಧನೆ ನೀಡುವತ್ತ ಗಮನ ಹರಿಸುತ್ತದೆ.

- **ವಿಧ 3:** ಎಲ್ಲಾ ವಿಷಯಗಳಲ್ಲಿ ಪದವಿ ಶಿಕ್ಷಣಕ್ಕೆ ಗಮನ ಹರಿಸುತ್ತ ಉನ್ನತಮಟ್ಟದ ಶಿಕ್ಷಣವನ್ನು ನೀಡುವ ದಿಶೆಯಲ್ಲಿ ಗಮನ ಕೇಂದ್ರೀಕರಿಸುತ್ತದೆ.

**ಸಿ.** ಈಗಾಗಲೇ ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಕ್ರೋಢೀಕರಿಸುವುದು ಮತ್ತು ಪುನರ್ರಚಿಸುವುದರ ಜೊತೆಗೆ ಹೊಸ ಸಂಸ್ಥೆಗಳನ್ನು ಸ್ಥಾಪನೆ ಮಾಡುವ ಮೂಲಕ ಈ ಮರುವಿನ್ಯಾಸವನ್ನು ಸಾಕಷ್ಟು ವ್ಯವಸ್ಥಿತ ಮತ್ತು ಚಿಂತನಾತ್ಮಕವಾಗಿ ನಡೆಸಲಾಗುತ್ತದೆ. ಈ ಹೊಸ ಸಂಸ್ಥೆಗಳ ರಚನಾವಿನ್ಯಾಸಕ್ಕೆ ಒತ್ತು ನೀಡುವ ಹಿನ್ನೆಲೆಯಲ್ಲಿ **ಮಿಷನ್ ನಲಂದಾ ಮತ್ತು ಮಿಷನ್ ತಕ್ಷಶಿಲಾ** ಎಂಬ ಎರಡು ಮಿಷನ್‌ಗಳನ್ನು ಆರಂಭಿಸಲಾಗುತ್ತದೆ. ಈ ಮಿಷನ್‌ಗಳ ಅಂಗವಾಗಿ ಕೆಲವು ಅಭಿವೃದ್ಧಿಪೂರಕ ಸಂಸ್ಥೆಗಳಾದ ಇಂಡಿಯನ್ ಇನ್ಸ್ಟಿಟ್ಯೂಟ್ಸ್ ಆಫ್ ಲಿಬರಲ್ ಆರ್ಟ್ಸ್/ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳನ್ನು ಈ ಕಾರ್ಯಾಚರಣೆಗಳ ಭಾಗವಾಗಿ ಸ್ಥಾಪಿಸಬಹುದು.

**ಡಿ.** ಈ ಎಲ್ಲ ಸಂಸ್ಥೆಗಳೂ **ವಿಶ್ವವಿದ್ಯಾನಿಲಯಗಳು ಅಥವಾ ಪದವಿ ಪ್ರಧಾನ ಮಾಡಬಲ್ಲ ಸ್ವಾಯತ್ತ ಕಾಲೇಜುಗಳಾಗಿರುತ್ತವೆ.**

**ಇ.** ಸಾರ್ವಜನಿಕ ಉನ್ನತ ಶಿಕ್ಷಣವನ್ನು ವಿಸ್ತರಿಸಲು ಮತ್ತು ಸಚೇತನಗೊಳಿಸುವ ಸಲುವಾಗಿ ನ್ಯಾಯಯುತವಾದ ಮತ್ತು ಪಾರದರ್ಶಕ ವ್ಯವಸ್ಥೆಯ ಮೂಲಕ **ಸಾಕಷ್ಟು ಮಟ್ಟಿಗೆ ಸಾರ್ವಜನಿಕ ಹೂಡಿಕೆಗೆ** ಅವಕಾಶ ಮಾಡಿಕೊಡಲಾಗುತ್ತದೆ.

**ಎಫ್.** ಭೌಗೋಳಿಕವಾಗಿ **ಹೆಚ್ಚು ಅನುಕೂಲತೆಗಳನ್ನು ಹೊಂದಿರದ ಪ್ರದೇಶಗಳಲ್ಲಿ** ಉನ್ನತ ಮಟ್ಟದ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ.

**ಜಿ.** ಈ ಹೊಸ ಸಾಂಸ್ಥಿಕ ರಚನಾವಿನ್ಯಾಸವು ವೃತ್ತಿಪರ ಕ್ಷೇತ್ರಗಳೂ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ಒಳಗೊಂಡಿರುತ್ತದೆ.

## 2. ಉತ್ತಮ ಗುಣಮಟ್ಟದ ಉದಾರ ಶಿಕ್ಷಣಕ್ಕೆ ಒತ್ತು ನೀಡುವುದು

**ಉದ್ದೇಶ:** ಎಲ್ಲ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ತಳಹದಿಯಾಗಿ ಆಯ್ದ ವಿಷಯಗಳು ಮತ್ತು ಕ್ಷೇತ್ರಗಳಲ್ಲಿ ಸಮಂಜಸವಾದ ಪರಿಣತಿಯನ್ನು ಹೊಂದುವ ಮೂಲಕ ಹೆಚ್ಚು ಪ್ರತಿಭಾಶಕ್ತಿಯುಳ್ಳ ಮತ್ತು ವಿಸ್ತಾರತೆಯನ್ನು ಆಧರಿಸಿದ ಉದಾರ ಶಿಕ್ಷಣದತ್ತ ಸಾಗುವುದು,

ಪ್ರತಿಭಾಶಕ್ತಿ ಮತ್ತು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವ ಪಠ್ಯಕ್ರಮದ ರಚನೆಗಳುಳ್ಳ ಅಧ್ಯಯನದ ವಿಭಾಗಗಳ ಸೃಜನಶೀಲ ಸಂಯೋಜನೆಗಳು ಮತ್ತು ಸಂಯೋಜಿತ ಕಾರ್ಯಕ್ರಮಗಳಲ್ಲಿ ಬಹು ನಿರ್ಗಮಿತ ಮತ್ತು ಸಮಗ್ರ ಕಾರ್ಯಕ್ರಮಗಳಿಗೆ ಮಾತ್ರವೇ ಪ್ರವೇಶ ಕಲ್ಪಿಸುವ ಸ್ಥಾನಗಳು, ಆಯ್ದ ವಿಭಾಗಗಳು ಮತ್ತು ಕ್ಷೇತ್ರಗಳಲ್ಲಿ ಕಟ್ಟುನಿಟ್ಟಿನ ಸಮಂಜಸವಾದ ಪರಿಣತಿಯನ್ನು ನೀಡುವ ಮೂಲಕ, ಎಲ್ಲಾ ಪದವಿ ಕೋರ್ಸುಗಳನ್ನು ಸಮಗ್ರ ಅಭಿವೃದ್ಧಿಯ ಭದ್ರ ಬುನಾದಿಯಾಗಿ ಒಂದು ಉದಾರ ಶಿಕ್ಷಣ ವಿಧಾನದಿಂದ ನಿರೂಪಿಸಲಾಗುತ್ತದೆ.

ಎ. ಸಾಂವಿಧಾನಿಕ ಮೌಲ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಸಮಗ್ರವಾದ ಬಹುಶಿಸ್ತಿನ ಮಾನ್ಯತೆ ಹೊಂದಿರುವ **ಉದಾರ ಶಿಕ್ಷಣವು** ಉನ್ನತ ಶಿಕ್ಷಣದ ಆಧಾರವಾಗಿರುತ್ತದೆ. ಇದು ಪ್ರಮುಖ ಜೀವನ ಸಾಮರ್ಥ್ಯಗಳು, ಕಟ್ಟುನಿಟ್ಟಿನ ಶಿಸ್ತಿನ ಬಗೆಗಿನ ತಿಳಿವಳಿಕೆ ಮತ್ತು ಸಾಮಾಜಿಕ-ನೈತಿಕ ಒಡಂಬಡಿಕೆಯ ನೀತಿಗಳಲ್ಲಿ ಅಭಿವೃದ್ಧಿ ಹೊಂದುತ್ತದೆ. ಉದ್ಯೋಗ ಮತ್ತು ವೃತ್ತಿಪರ ಕ್ಷೇತ್ರಗಳನ್ನು ಒಳಗೊಂಡಂತೆ ಎಲ್ಲಾ ವಿಭಾಗಗಳು, ಕಾರ್ಯಕ್ರಮಗಳು ಮತ್ತು ಕ್ಷೇತ್ರಗಳಲ್ಲಿ ಪದವಿ ಮಟ್ಟಗಳೆಲ್ಲದರಲ್ಲಿಯೂ ಇದು ಅತಿ ಸಮೀಪಗತವಾಗಿರುತ್ತದೆ.

ಬಿ. ಭಾರತೀಯ ತಂತ್ರಜ್ಞಾನ ಸಂಸ್ಥೆಗಳ (Indian Institutes of Technology) ಮಾದರಿ ಮತ್ತು ಆ ಮಟ್ಟಕ್ಕೆ ಸರಿಹೊಂದುವಂತಹ ಹತ್ತು ಉದಾರ ಕಲೆಯ ಭಾರತೀಯ ಸಂಸ್ಥೆ / ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾನಿಲಯಗಳನ್ನು (Indian Institutes of Liberal Arts/ Multidisciplinary Education and Research Universities) ಸ್ಥಾಪಿಸಲಾಗುವುದು.

ಸಿ. **ಕಲ್ಪನಾಶಕ್ತಿಯನ್ನು ಬಳಸುವ ಮತ್ತು ನಮ್ಯ ಪಠ್ಯಕ್ರಮದ ರಚನೆಗಳ** ಅಧ್ಯಯನದ ವಿಭಾಗಗಳು ಸೃಜನಶೀಲ ಸಂಯೋಜನೆಯನ್ನು ಸಕ್ರಿಯಗೊಳಿಸುತ್ತವೆ ಮತ್ತು ವಿದ್ಯಾರ್ಥಿಗಳಿಗೆ ಅನೇಕ ಉಪಯುಕ್ತ ನಿರ್ಗಮನ ಮತ್ತು ಪ್ರವೇಶ ಸ್ಥಾನಗಳನ್ನು ನೀಡುತ್ತವೆ, ಹೀಗಾಗಿ ಇವು ಪ್ರಸ್ತುತ ಚಾಲ್ತಿಯಲ್ಲಿರುವ ಕಟ್ಟುನಿಟ್ಟಾದ ಗಡಿಗಳನ್ನು ನಾಶಪಡಿಸುತ್ತವೆ ಮತ್ತು ಜೀವಿತಾವಧಿಯ ಕಲಿಕೆಗೆ ಸಾಧ್ಯತೆಗಳನ್ನು ಸೃಷ್ಟಿಸುತ್ತವೆ. ಪದವಿ (ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿ) ಮಟ್ಟದ ಶಿಕ್ಷಣವು ಕಟ್ಟುನಿಟ್ಟಿನ ಸಂಶೋಧನಾ-ಆಧಾರಿತ ಪ್ರಾವಿಣ್ಯತೆ ಅಥವಾ ತಜ್ಞತೆಯನ್ನು ಒದಗಿಸುತ್ತದೆ.

**ಡಿ.** ಪದವಿ ಶಿಕ್ಷಣವು 3 ಅಥವಾ 4 ವರ್ಷಗಳ ಅವಧಿಯದ್ದಾಗಿರಬಹುದು. ಸಂಸ್ಥೆಗಳು ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ನಿರ್ಗಮನ ಆಯ್ಕೆಯ ಅವಕಾಶಗಳನ್ನು, ಅಂದರೆ 2 ವರ್ಷ ಅಧ್ಯಯನ ಮುಗಿದ ನಂತರ ಅಥವಾ 1 ವರ್ಷದ ಅವಧಿಯು ಮುಗಿದ ನಂತರ ಸೂಕ್ತ ಪ್ರಮಾಣೀಕರಣದೊಂದಿಗೆ, ಒಂದು ವಿಭಾಗ ಅಥವಾ ಕ್ಷೇತ್ರದಲ್ಲಿ ಒಂದು ಉನ್ನತಮಟ್ಟದ ಡಿಪ್ಲೊಮಾ (ವೃತ್ತಿಪರ ಮತ್ತು ಉದ್ಯೋಗ ಕ್ಷೇತ್ರಗಳನ್ನು ಒಳಗೊಂಡಂತೆ) ಪ್ರಮಾಣಪತ್ರವನ್ನು ನೀಡಬಹುದು.

**ಇ.** ನಾಲ್ಕು ವರ್ಷಗಳ ಕಾರ್ಯಕ್ರಮವು ಉದಾರ ಶಿಕ್ಷಣದ ಸರ್ವತೋಮುಖ ಪ್ರಯೋಜನಗಳನ್ನು ಪಡೆದುಕೊಳ್ಳುವ ಅನುಭವವನ್ನು ವಿದ್ಯಾರ್ಥಿಗಳಿಗೆ ನೀಡುತ್ತದೆ. ಆಯ್ಕೆ ಮಾಡಿದ ಪ್ರಮುಖ ಮತ್ತು ಗೌಣ (ಮೇಜರ್ ಮತ್ತು ಮೈನರ್) ವಿಷಯಗಳಲ್ಲಿ ನೀಡಲಾಗುವ ಈ ಪದವಿಗೆ ಬ್ಯಾಚುಲರ್ ಆಫ್ ಲಿಬರಲ್ ಆರ್ಟ್ಸ್ ಎಂದು ಕರೆಯಲಾಗುವುದು. ಮೂರು ವರ್ಷಗಳ ಕಾರ್ಯಕ್ರಮದಿಂದ ಸ್ನಾತಕಪೂರ್ವ ಪದವಿ ದೊರೆಯುತ್ತದೆ. ವಿದ್ಯಾರ್ಥಿಗಳು ಸಂಶೋಧನೆಯನ್ನು ಕೈಗೊಳ್ಳುವುದಾದರೆ ಈ ಎರಡೂ ಕಾರ್ಯಕ್ರಮಗಳು 'ಹಾನರ್ಸ್'ನೊಂದಿಗೆ ಪದವಿ ದೊರೆಯುತ್ತದೆ.

**ಎಫ್.** ಕೆಲವು ವೃತ್ತಿಪರ ಶಿಕ್ಷಣಗಳು (ಉದಾಹರಣೆಗೆ. ಶಿಕ್ಷಕರ ಶಿಕ್ಷಣ, ಎಂಜಿನಿಯರಿಂಗ್, ಔಷಧ, ಕಾನೂನು) ಪದವಿಗಾಗಿ 4 ವರ್ಷಗಳ (ಅಥವಾ ಇನ್ನೂ ಹೆಚ್ಚಿನ) ಅವಧಿಯನ್ನು ಮಾತ್ರ ಹೊಂದಿರಬಹುದು.

**ಜಿ.** ಸ್ನಾತಕೋತ್ತರ ಶೈಕ್ಷಣಿಕ ಕ್ರಾಯಕ್ರಮಗಳ ವಿಭಿನ್ನ ಯೋಜನೆಗಳನ್ನು ಒದಗಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳಬಹುದಾಗಿರುತ್ತದೆ. ಉದಾಹರಣೆಗೆ, 3 ವರ್ಷದ ಪದವಿ ಕೋರ್ಸನ್ನು ಪೂರ್ಣಗೊಳಿಸಿದವರು ನಂತರ 2 ವರ್ಷದ ಕೋರ್ಸಿನಲ್ಲಿ ಎರಡನೆಯ ವರ್ಷವನ್ನು ಸಂಪೂರ್ಣವಾಗಿ ಸಂಶೋಧನೆಗೆ ಮೀಸಲಾಗಿರಿಸಬಹುದು; ಅದು ಒಂದು ಸಂಯೋಜಿತ ಅಥವಾ ಸಮಗ್ರ 5 ವರ್ಷದ ಸ್ನಾತಕೋತ್ತರ ಕಾರ್ಯಕ್ರಮವೂ ಆಗಿರಬಹುದು ಮತ್ತು ಹಾನರ್ಸ್ ನೊಂದಿಗೆ 4 ವರ್ಷದ ಪದವಿ ಪೂರೈಸುವ ವಿದ್ಯಾರ್ಥಿಗಳು 1 ವರ್ಷದ ಸ್ನಾತಕೋತ್ತರ ಕಾರ್ಯಕ್ರಮವನ್ನು ಪೂರ್ಣಗೊಳಿಸಬಹುದು.

**ಎಚ್.** ಪಿಎಚ್.ಡಿ. ಪದವಿಗಾಗಿ ಸಂಶೋಧನೆ ಕೈಗೊಳ್ಳಬೇಕಾದಲ್ಲಿ ಸ್ನಾತಕ ಪದವಿಯಾಗಲಿ ಅಥವಾ ಮಾನ್ಯತೆಯೊಂದಿಗೆ ಪಡೆದ ನಾಲ್ಕು 4 ಪದವಿಯ ಅಗತ್ಯವಿರುತ್ತದೆ. ಹೀಗಾಗಿ ಎಂ.ಫಿಲ್. ಶಿಕ್ಷಣ ಕಾರ್ಯಕ್ರಮವನ್ನು ಸ್ಥಗಿತಗೊಳಿಸಬಹುದು.

.

## 3. ಅನುಕೂಲಕರವಾದ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು

**ಉದ್ದೇಶ**: ಉಲ್ಲಾಸದಾಯಕ, ಕಟ್ಟುನಿಟ್ಟಿನ ಮತ್ತು ಸಂವೇದನಾಶೀಲ ಗುಣವುಳ್ಳ ಪಠ್ಯಕ್ರಮ, ಆಕರ್ಷಕವಾದ ಮತ್ತು ಪರಿಣಾಮಕಾರಿಯಾದ ಶಿಕ್ಷಣ ನೀಡುವುದು ಮತ್ತು ಕಲಿಕೆಯನ್ನು ಅತ್ಯುತ್ತಮವಾಗಿಸುವ ಹಾಗೂ ವಿದ್ಯಾರ್ಥಿಗಳ ಒಟ್ಟಾರೆ ಅಭಿವೃದ್ಧಿಯನ್ನು ಉತ್ತಮಗೊಳಿಸುವಂತಹ ಕಾಳಜಿಯುಳ್ಳ ಬೆಂಬಲವನ್ನು ಖಚಿತಪಡಿಸಿಕೊಳ್ಳುವುದು.

ಉನ್ನತ ಶಿಕ್ಷಣದಲ್ಲಿನ ಪಠ್ಯಕ್ರಮ ಮತ್ತು ಬೊಧನಾಕ್ರಮವು ವಿಷಯಗಳನ್ನು ಕಂಠಪಾಟ ಮಾಡುವ ಮತ್ತು ಯಾಂತ್ರಿಕ ಕಾರ್ಯವಿಧಾನಗಳ ಮೂಲಕ ಕಲಿಯುವಿಕೆಯಿಂದ ದೂರ ಸರಿಸಿ ಪ್ರಜಾಪ್ರಭುತ್ವದ ಸಕ್ರಿಯ ನಾಗರಿಕರಾಗಿ ಮತ್ತು ಯಾವುದೇ ಕ್ಷೇತ್ರದಲ್ಲಿ ಯಶಸ್ವಿ ವೃತ್ತಿಪರರಾಗಿ ಕೊಡುಗೆ ನೀಡಲು ಯುವಜನರಿಗೆ ಅನುವು ಮಾಡಿಕೊಡುತ್ತದೆ.

ಎ. ಸ್ಪಂದನಾಶೀಲ ಮತ್ತು ಕಟ್ಟುನಿಟ್ಟಿನ ಪಠ್ಯಕ್ರಮದ ಅಭಿವೃದ್ಧಿಗೆ **ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ** (The National Skills Qualification Framework) ಮೂಲಕ ಮಾರ್ಗದರ್ಶನ ನೀಡಲಾಗುವುದು, ಇದು ವಿವಿಧ ಕ್ಷೇತ್ರಗಳು ಮತ್ತು ವಿಭಾಗಗಳಲ್ಲಿ ನೀಡಲಾಗುವ ಪದವಿ / ಡಿಪ್ಲೊಮಾ / ಪ್ರಮಾಣೀಕರಣಕ್ಕೆ ಸಂಬಂಧಿಸಿದ ಕಲಿಕೆಯ ಫಲಿತಾಂಶಗಳ ರೂಪರೇಖೆಯನ್ನು ನೀಡುತ್ತದೆ. ಶೈಕ್ಷಣಿಕ ಮತ್ತು ಉದ್ಯೋಗ/ವೃತ್ತಿಪರ ಕ್ಷೇತ್ರಗಳಾದ್ಯಂತ ಸಮಾನತೆ ಮತ್ತು ಚಲನಶೀಲತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ರಾಷ್ಟ್ರೀಯ ಕೌಶಲಗಳ ಅರ್ಹತೆಗಳುಳ್ಳ ಚೌಕಟ್ಟಿನೊಂದಿಗೆ ಈ ಚೌಕಟ್ಟನ್ನು ಹೊಂದಿಸಲಾಗುತ್ತದೆ.

ಬಿ. ನಮ್ಯತೆ ಮತ್ತು ಹೊಸ ಕಲ್ಪನೆಗಳಿಗೆ ಅವಕಾಶ ನೀಡುವ ಸಲುವಾಗಿ **ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಯನ್ನು** (Choice Based Credit System) ಪರಿಷ್ಕರಿಸಲಾಗುವುದು ಮತ್ತು ಸುಧಾರಿಸಲಾಗುವುದು.

ಸಿ. ಪರಿಣಾಮಕಾರಿ ಬೋಧನಾಕ್ರಮದ ಅಭ್ಯಾಸಗಳ ಮೂಲಕ ಕಲಿಕೆಯ ಅನುಭವಗಳನ್ನು ಉತ್ತೇಜಿಸುವುದು; ಅಂದರೆ ಎಲ್ಲಾ ವಿದ್ಯಾರ್ಥಿಗಳಿಗೂ ಸಾಮಾಜಿಕ ಹೊಣೆಗಾರಿಕೆಯನ್ನು ನೀಡುವ ಸಲುವಾಗಿ ಅರ್ಥಪೂರ್ಣ ಅವಕಾಶಗಳನ್ನು ಸಹ ನೀಡಲಾಗುವುದು. ವಿದ್ಯಾರ್ಥಿಗಳನ್ನು ಶೈಕ್ಷಣಿಕ ಅಂಶಗಳ ಮೇಲೆ ಮಾತ್ರವಲ್ಲದೆ ಸಮಗ್ರ ಸಾಮರ್ಥ್ಯಗಳು ಮತ್ತು ಮನೋನಿಯಂತ್ರಣದ ಮೇಲೆಯೂ ಮೌಲ್ಯಮಾಪನ ಮಾಡಲಾಗುತ್ತದೆ.

ಡಿ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಗಳನ್ನು ಪಡೆಯುವಂತೆ ಸಹಾಯ ಮಾಡಲು **ಶೈಕ್ಷಣಿಕ, ಆರ್ಥಿಕ ಮತ್ತು ಭಾವನಾತ್ಮಕ ಬೆಂಬಲದ** ಲಭ್ಯವಿರುತ್ತದೆ.

ಇ. **ಮುಕ್ತ ಮತ್ತು ದೂರಶಿಕ್ಷಣದ ಕಲಿಕೆಯನ್ನು** ವಿಸ್ತರಿಸಲಾಗುವುದು, ಇಂದರ ಮೂಲಕ ಒಟ್ಟು ದಾಖಲಾತಿ ಅನುಪಾತವನ್ನು ಶೇಕಡಾ 50ಕ್ಕೆ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಲಾಗುತ್ತದೆ. ಆನ್‌ಲೈನ್ ಡಿಜಿಟಲ್ ರಿಪಾಸಿಟರಿ, ಸಂಶೋಧನೆಗಾಗಿ ಧನಸಹಾಯ, ಸುಧಾರಿತ ವಿದ್ಯಾರ್ಥಿ ಸೇವೆಗಳು, MOOCsನ ಕ್ರೆಡಿಟ್ ಆಧಾರಿತ ಮಾನ್ಯತೆ ಇತ್ಯಾದಿಗಳಂತಹ ಕ್ರಮಗಳನ್ನು ತೆಗೆದುಕೊಂಡು ಇವುಗಳನ್ನು ತರಗತಿಗಳಲ್ಲಿ ನೆಡೆಯುವ ಕೋರ್ಸುಗಳಷ್ಟೆ ಉತ್ತಮ ಗುಣಮಟ್ಟದ ಕೊರ್ಸುಗಳನ್ನಾಗಿಸುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

**ಎಫ್.** ಸಾಂಸ್ಥಿಕ ಸಹಯೋಗಗಳು ಮತ್ತು ವಿದ್ಯಾರ್ಥಿ ಮತ್ತು ಅಧ್ಯಾಪಕರ ಚಲನಶೀಲತೆಯ ಮೂಲಕ ಶೈಕ್ಷಣಿಕ **ಅಂತರರಾಷ್ಟ್ರೀಕರಣವನ್ನು** ಸುಗಮಗೊಳಿಸಲಾಗುವುದು. ಅಂತರಾಷ್ಟ್ರೀಯ ಶಿಕ್ಷಣಕ್ಕಾಗಿ ಆಯ್ದ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಒಂದು ಅಂತರ-ವಿಶ್ವವಿದ್ಯಾನಿಲಯ ಕೇಂದ್ರವನ್ನು ಸ್ಥಾಪಿಸಲಾಗುವುದು.

## 4. ಸಾಮರ್ಥ್ಯವುಳ್ಳ, ಬದ್ಧತೆಯುಳ್ಳ ಮತ್ತು ದಕ್ಷ ಬೋಧಕವರ್ಗ

**ಉದ್ದೇಶ**: ಬೋಧನೆ ಮತ್ತು ಸಂಶೋಧನೆಯಲ್ಲಿನ ಶ್ರೇಷ್ಠತೆಗೆ ಶಕ್ತಿ ತುಂಬುವುದಕ್ಕಾಗಿ ಹೆಚ್ಚಿನ ಸಾಮರ್ಥ್ಯ ಮತ್ತು ಆಳವಾದ ಬದ್ಧತೆಯೊಂದಿಗೆ ಬೋಧಕವರ್ಗವನ್ನು ಸಶಕ್ತಗೊಳಿಸುವುದು.

ಉನ್ನತ ಶಿಕ್ಷಣ ಸಂಸ್ಥೆಗಳ ಯಶಸ್ಸಿಗೆ ಕಾರಣವಾದ ಪ್ರಮುಖ ಅಂಶವೆಂದರೆ ಅದರ ಬೋದಕವರ್ಗದ ಸಾಮರ್ಥ್ಯ ಅಥವಾ ದಕ್ಷತೆ ಮತ್ತು ನೈತಿಕ ಬದ್ಧತೆ. ಈ ನೀತಿಯು ಬೋಧಕವರ್ಗವನ್ನು ಉನ್ನತ ಶಿಕ್ಷಣದ ಮುಖ್ಯ ಭಾಗವನ್ನಾಗಿಸುತ್ತದೆ.

ಎ. ಪ್ರತಿಯೊಂದು ಸಂಸ್ಥೆಯು ತನಗೆ ಅಗತ್ಯವಾದಷ್ಟು ಬೋಧಕವರ್ಗವನ್ನು ಹೊಂದಿದ್ದು, ಎಲ್ಲಾ ಕೋರ್ಸುಗಳು, ವಿಷಯ ಮತ್ತು ಕ್ಷೇತ್ರದ ಅಗತ್ಯತೆಗಳನ್ನು ಪೂರೈಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಅಪೇಕ್ಷಣೀಯ ವಿದ್ಯಾರ್ಥಿ-ಶಿಕ್ಷಕ ಅನುಪಾತವನ್ನು (30:1ಕ್ಕಿಂತ ಹೆಚ್ಚಿಲ್ಲದಂತೆ) ಪಾಲಿಸಿಕೊಂಡು ಬರುವುದು ಮತ್ತು ವೈವಿಧ್ಯತೆಯನ್ನು ಖಾತ್ರಿಪಡಿಸುವುದು.

ಬಿ. ಚಾಲ್ತಿಯಲ್ಲಿರುವ ತಾತ್ಕಾಲಿಕ ಮತ್ತು ಒಪ್ಪಂದದ ಅಥವಾ ಗುತ್ತಿಗೆ ಆಧಾರಿತ ನೇಮಕಾತಿಗಳ ವಿಧಾನವನ್ನು ತಕ್ಷಣವೇ ನಿಲ್ಲಿಸಲಾಗುತ್ತದೆ.

ಸಿ. ಬೋದಕವರ್ಗದ ನೇಮಕಾತಿಯು ಶೈಕ್ಷಣಿಕ ಪರಿಣತಿ, ಬೋಧನಾ ಸಾಮರ್ಥ್ಯಗಳು ಮತ್ತು ಸಾರ್ವಜನಿಕ ಸೇವೆಗಾಗಿ ಹೊಂದಿರುವ ನಿಲುವುಗಳನ್ನು ಆಧರಿಸಿರುತ್ತದೆ.

ಡಿ. ಬೋಧಕವರ್ಗಕ್ಕಾಗಿ ಸೂಕ್ತವಾಗಿ ವಿನ್ಯಾಸಗೊಳಿಸಲಾದ ಶಾಶ್ವತ ಉದ್ಯೋಗ (ಅಧಿಕಾರಾವಧಿ) ಹಾದಿಯ ವ್ಯವಸ್ಥೆಯನ್ನು ಪರಿಚಯಿಸಲಾಗುವುದು - ಇದು 2030ರ ವೇಳೆಗೆ ಖಾಸಗಿ ಸಂಸ್ಥೆಗಳೂ ಸೇರಿದಂತೆ ಎಲ್ಲಾ ಸಂಸ್ಥೆಗಳಲ್ಲಿಯೂ ಪೂರ್ಣಪ್ರಮಾಣದಲ್ಲಿ ಸಕ್ರಿಯಗೊಳ್ಳಲಿದೆ.

ಇ. ಬೋದವರ್ಗದವರು ತಮ್ಮ ತಮ್ಮ ಶೈಕ್ಷಣಿಕ ಕೋರ್ಸುಗಳಿಗೆ ಪಠ್ಯಕ್ರಮದಲ್ಲಿ ಆಯ್ಕೆಗಳನ್ನು ಮಾಡಲು ಮತ್ತು ಶೈಕ್ಷಣಿಕ ಸ್ವಾತಂತ್ರ್ಯದೊಂದಿಗೆ ಸಂಶೋಧನೆಯನ್ನು ಮುಂದುವರಿಸಲು ಸಶಕ್ತರನ್ನಾಗಿಸಲಾಗುವುದು.

ಎಫ್. ಬೋಧಕವರ್ಗಕ್ಕಾಗಿ ಎಲ್ಲ ಸಂಸ್ಥೆಗಳೂ ನಿರಂತರ ವೃತ್ತಿಪರ ಅಭಿವೃದ್ಧಿ ಯೋಜನೆಯನ್ನು ಅಭಿವೃದ್ಧಿಪಡಿಸುತ್ತವೆ ಮತ್ತು ಇದರ ಅನುಷ್ಠಾನಕ್ಕೆ ಪ್ರಕ್ರಿಯೆಯನ್ನು ನಿರ್ಧರಿಸುತ್ತವೆ. ಈ ಯೋಜನೆಯು

ಕ್ಷೇತ್ರ/ವಿಷಯದಲ್ಲಿ ಸಾಮರ್ಥ್ಯ ಅಭಿವೃದ್ಧಿ, ಶೈಕ್ಷಣಿಕ ಸಾಮರ್ಥ್ಯಗಳು, ಸಂಶೋಧನೆ ಮತ್ತು ಅಭ್ಯಾಸಕ್ಕೆ ಕೊಡುಗೆಗಳನ್ನು ಒಳಗೊಂಡಿರಬೇಕು.

**ಜಿ.** ಬೋದಕವರ್ಗದ ನೇಮಕಾತಿ ಮತ್ತು ಅಭಿವೃದ್ಧಿ, ವೃತ್ತಿಜೀವನದಲ್ಲಿ ಹಂತಹಂತವಾಗಿ ಪ್ರಗತಿ ಹೊಂದುವುದು, ಪರಿಹಾರ ನಿರ್ವಹಣೆ ಇವು ಪ್ರತಿಯೊಂದು ಸಂಸ್ಥೆಯ ಸಾಂಸ್ಥಿಕ ಅಭಿವೃದ್ಧಿ ಯೋಜನೆಯ ಭಾಗವಾಗಿರುತ್ತವೆ.

## 5. ಸಶಕ್ತ ಆಡಳಿತ ಮತ್ತು ಸ್ವಾಯತ್ತತೆ

**ಉದ್ದೇಶ**: ಸಮರ್ಥ ಮತ್ತು ನೈತಿಕ ನೆಲೆಗಟ್ಟಿನ ನಾಯಕತ್ವದೊಂದಿಗೆ ಸ್ವತಂತ್ರ, ಸ್ವಯಂ-ಆಡಳಿತ ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳು.

ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಸಂಶೋಧನೆಗಳಿಗಾಗಿ ಒಂದು ಪೋಷಕ ಸಂಸ್ಕೃತಿಯಲ್ಲಿ ಬೌದ್ಧಿಕ ಪಕ್ವತೆಯು ಅಗತ್ಯವಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತವು ಈ ಸಂಸ್ಕೃತಿಯನ್ನು ನಿರ್ಧರಿಸುತ್ತದೆ.

**ಎ.** ಸಂಪೂರ್ಣ ಶೈಕ್ಷಣಿಕ ಮತ್ತು ಆಡಳಿತ ಸ್ವಾಯತ್ತತೆಯೊಂದಿಗೆ ಉನ್ನತ ಶಿಕ್ಷಣ ಸಂಸ್ಥೆಗಳನ್ನು **ಸ್ವತಂತ್ರ ಮಂಡಳಿಗಳು** ನಿಯಂತ್ರಿಸುತ್ತವೆ. ಮಂಡಳಿಯ ರಚನೆ ಮತ್ತು ಅಧ್ಯಕ್ಷರು ಮತ್ತು ಉಪಕುಲಪತಿ / ನಿರ್ದೇಶಕರು (ಮುಖ್ಯ ಕಾರ್ಯನಿರ್ವಾಹಕ) ಇವರುಗಳ ನೇಮಕಾತಿಗೆ ಸರ್ಕಾರವೂ ಸೇರಿದಂತೆ ಬಾಹ್ಯ ಹಸ್ತಕ್ಷೇಪವನ್ನು ನಿರಾಕರಿಸುವುದನ್ನು ಖಚಿತಪಡಿಸುತ್ತದೆ, ಹೀಗಾಗಿ ಸಂಸ್ಥೆಗೆ ಬದ್ಧತೆಯೊಂದಿಗೆ ಹೆಚ್ಚಿನ ಸಾಮರ್ಥ್ಯವುಳ್ಳ ಜನರನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

**ಬಿ.** ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು **ಸ್ವಾಯತ್ತ ಸ್ವಯಂ-ಆಡಳಿತ ಘಟಕಗಳಾಗುತ್ತವೆ**. ಈ ಮೂಲಕ 'ಅಂಗೀಕರಿಸುವಿಕೆ'ಯ ಅಭ್ಯಾಸವನ್ನು ಕೊನೆಗೊಳಿಸಲಾಗುತ್ತದೆ. 'ಅಂಗೀಕೃತ ಕಾಲೇಜುಗಳನ್ನು' ಸ್ವಾಯತ್ತ ಪದವಿ ನೀಡುವ ಕಾಲೇಜುಗಳಾಗಿ ಅಭಿವೃದ್ಧಿಹೊಂದಲು ಬೆಂಬಲ ನೀಡಲಾಗುವುದು ಮತ್ತು 'ಅಂಗಿಕರಿಸುವ ವಿಶ್ವವಿದ್ಯಾಲಯಗಳು' ಸಕ್ರಿಯವಾದ ಬಹುಶಿಸ್ತೀಯ ಸಂಸ್ಥೆಗಳಾಗಿ ಅಭಿವೃದ್ಧಿ ಹೊಂದುತ್ತವೆ.

**ಸಿ.** **ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು** ನಿಯಂತ್ರಕ ಆಡಳಿತ ವ್ಯವಸ್ಥೆಯೊಂದಿಗೆ ಸಮಾನವಾಗಿ ನಡೆಸಿಕೊಳ್ಳಲಾಗುತ್ತದೆ. ಶಿಕ್ಷಣದ ವಾಣಿಜ್ಯೀಕರಣವನ್ನು ನಿಲ್ಲಿಸಲಾಗುವುದು ಮತ್ತು ಜನಪರ ಪ್ರಯತ್ನಗಳನ್ನು ಪ್ರೋತ್ಸಾಹಿಸಲಾಗುತ್ತದೆ.

**ಡಿ.** **ವ್ಯವಸ್ಥೆಯಲ್ಲಿ ಸ್ವಾಯತ್ತತೆಯನ್ನು ಅಳವಡಿಸಲಾಗುವುದು-** ಅಂದರೆ ಇದರ ಸಂಸ್ಕೃತಿ, ರಚನೆ ಮತ್ತು ಕಾರ್ಯನಿರ್ವಹಣೆಗಳಲ್ಲಿ. ಬೋಧಕವರ್ಗಕ್ಕೆ ಬೋಧನಾಕ್ರಮ, ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ಸಂಶೋಧನೆಯೂ ಸೇರಿದಂತೆ ಶೈಕ್ಷಣಿಕ ಸ್ವಾತಂತ್ರ್ಯ ಹಾಗೂ ಪಠ್ಯಕ್ರಮ ಸಿದ್ಧಪಡಿಸುವುದರಲ್ಲಿ ಸಶಕ್ತರನ್ನಾಗಿಸಲಾಗುತ್ತದೆ. ಇದು ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ನಡೆಸಲು, ಪಠ್ಯಕ್ರಮವನ್ನು ನಿರ್ಧರಿಸಲು, ವಿದ್ಯಾರ್ಥಿಗಳ ಸಾಮರ್ಥ್ಯವನ್ನು ನಿರ್ಧರಿಸಲು, ಸಂಪನ್ಮೂಲ ಅಗತ್ಯತೆಗಳನ್ನು ನಿರ್ಧರಿಸಲು ಮತ್ತು ಆಡಳಿತ ಮತ್ತು ಜನರ ನಿರ್ವಹಣಾ ವ್ಯವಸ್ಥೆಗಳನ್ನು ಒಳಗೊಂಡಂತೆ ಅವರ ಆಂತರಿಕ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಸ್ವಾತಂತ್ರ್ಯವನ್ನು ಒಳಗೊಂಡಿರುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿಜವಾದ ಅರ್ಥದಲ್ಲಿ ಸ್ವಾಯತ್ತವಾದ, ಸ್ವತಂತ್ರವಾದ, ಸ್ವಯಂ-ಆಡಳಿತವುಳ್ಳ ಘಟಕಗಳಾಗಿ ಅಭಿವೃದ್ಧಿಪಡಿಸಲಾಗುತ್ತದೆ.

## 6. ನಿಯಂತ್ರಣ ವ್ಯವಸ್ಥೆಯ ಪರಿವರ್ತನೆ

**ಉದ್ದೇಶ:** ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆ ಮತ್ತು ಸಾರ್ವಜನಿಕ ಮನೋಭಾವವನ್ನು ಪ್ರೋತ್ಸಾಹಿಸುವ ಸಲುವಾಗಿ ಪರಿಣಾಮಕಾರಿ, ಸಶಕ್ತಗೊಳಿಸುವ ಮತ್ತು ಸ್ಪಂದನಾತ್ಮಕ ನಿಯಂತ್ರಣವನ್ನು ತರುವುದು.

ನಿಯಂತ್ರಣವು ಉತ್ತಮ ಆಡಳಿತದ ಜೊತೆಗೆ ಸಾರ್ವಜನಿಕ ಉತ್ಸಾಹ, ನ್ಯಾಯ, ಉತ್ಕೃಷ್ಟತೆ, ಆರ್ಥಿಕ ಸ್ಥಿರತೆ ಮತ್ತು ಪ್ರಾಮಾಣಿಕತೆಯನ್ನು ಖಚಿತಪಡಿಸಿಕೊಳ್ಳಲು ಸ್ಪಂದನಾತ್ಮಕದ ಮತ್ತು ಸರಳವಾದ ಅಂಶಗಳನ್ನು ಹೊಂದಿರುತ್ತದೆ.

ಎ. **ಮಾನದಂಡ ನಿಗದಿ, ಧನಸಹಾಯ, ಮಾನ್ಯತೆ ಮತ್ತು ನಿಯಂತ್ರಣ**ದ ಕಾರ್ಯಗಳನ್ನು ಬೇರ್ಪಡಿಸಲಾಗುತ್ತದೆ ಮತ್ತು ಇವುಗಳನ್ನು **ಸ್ವತಂತ್ರ ಸಂಸ್ಥೆಗಳ ಮೂಲಕ ನಡೆಸಿ** ಅಧಿಕಾರದ ಕೇಂದ್ರೀಕರಣ ಮತ್ತು ಹಿತಾಸಕ್ತಿಯ ಸಂಘರ್ಷಣೆಗಳನ್ನು ತೊಡೆದುಹಾಕಲಾಗುತ್ತದೆ.

ಬಿ. **ರಾಷ್ಟ್ರೀಯ ಉನ್ನತ ಶಿಕ್ಷಣ ನಿಯಂತ್ರಣ ಪ್ರಾಧಿಕಾರವು** (National Higher Education Regulatory Authority) ವೃತ್ತಿಪರ ಶಿಕ್ಷಣಗಳೂ ಸೇರಿದಂತೆ ಎಲ್ಲ ಬಗೆಯ ಉನ್ನತ ಶಿಕ್ಷಣವನ್ನು ನಿಯಂತ್ರಿಸುವ ನಿಯಂತ್ರಕವಾಗಿರುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಎಲ್ಲ ಬಗೆಯ ನಿಯಂತ್ರಣ ಸಂಸ್ಥೆಗಳು ವೃತ್ತಿಪರ ಮಾನದಂಡ ನಿಗದಿ ಮಾಡುವ ಸಂಸ್ಥೆಗಳಾಗಿ ಮಾರ್ಪಡುತ್ತವೆ.

ಸಿ. ಪ್ರಸ್ತುತ ಇರುವ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವನ್ನು (University Grants Commission) ಉನ್ನತ ಶಿಕ್ಷಣ ಧನಸಹಾಯ ಸಮಿತಿಯಾಗಿ (Higher Education Grants Council) ಬದಲಾಯಿಸಲಾಗುತ್ತದೆ.

ಡಿ. 'ಪದವಿ ವೈಶಿಷ್ಟ್ಯತೆಗಳನ್ನು' ವ್ಯಾಖ್ಯಾನಿಸಲು, ಸಾಮಾನ್ಯ ಶಿಕ್ಷಣ ಮಂಡಳಿಯನ್ನು (General Education Council) ಸ್ಥಾಪಿಸಲಾಗುವುದು, (The General Education Council) ಈ ಮೂಲಕ ರಾಷ್ಟ್ರೀಯ ಉನ್ನತ ಶಿಕ್ಷಣ ಅರ್ಹತಾ ಚೌಕಟ್ಟನ್ನು (National Higher Education Qualifications Framework) ಅಭಿವೃದ್ಧಿಪಡಿಸಲಾಗುತ್ತದೆ ಮತ್ತು ಅದರಿಂದ ಉನ್ನತ ಶಿಕ್ಷಣದಲ್ಲಿ 'ಕಲಿಕೆಯಿಂದಾದ ಫಲಿತಾಂಶಗಳನ್ನು ನಿರೀಕ್ಷಿಸಬಹುದು'.

ಇ. **ಮೂಲ ನಿಯತಾಂಕಗಳ ಮೇಲಿನ ಮಾನ್ಯತೆಯು ನಿಯಂತ್ರಣಕ್ಕೆ ಆಧಾರವಾಗುತ್ತದೆ.** ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಮಿತಿಯು (National Assessment and Accreditation Council) ಮಾನ್ಯತಾ ಸಂಸ್ಥೆಗಳ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ.

**ಎಫ್. ಸಾರ್ವಜನಿಕ ಮತ್ತು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಒಂದು ಸಾಮಾನ್ಯ ನಿಯಂತ್ರಕ ಆಡಳಿತವು** ಇರುತ್ತದೆ. **ಖಾಸಗಿ ಜನಪರ ಪ್ರಯತ್ನಗಳ ಉಪಕ್ರಮವನ್ನು** ಪ್ರೋತ್ಸಾಹಿಸಲಾಗುವುದು.

**ಜಿ.** **ಉನ್ನತ** ಶಿಕ್ಷಣದ ರಾಜ್ಯ ಇಲಾಖೆಗಳು ನೀತಿಯ ಹಂತದಲ್ಲಿ ತೊಡಗಿಸಿಕೊಳ್ಳುತ್ತವೆ; ಉನ್ನತ ಶಿಕ್ಷಣದ ರಾಜ್ಯ ಸಮಿತಿಗಳು ವರಿಷ್ಠರ ಬೆಂಬಲ ಮತ್ತು ಉತ್ತಮ ಅಭ್ಯಾಸ ಹಂಚಿಕೆಗಳ ಸೌಲಭ್ಯವನ್ನು ಒದಗಿಸುತ್ತವೆ.

# ಶಿಕ್ಷಕರ ಶಿಕ್ಷಣ ಮತ್ತು ತರಬೇತಿ

## 1. ಶಿಕ್ಷಕರಿಗೆ ಕಠಿಣ ತರಬೇತಿ

**ಉದ್ದೇಶ:** ಶಿಕ್ಷಕರ ಶಿಕ್ಷಣ ವ್ಯವಸ್ಥೆಯನ್ನು ಬಹುಶಿಸ್ತೀಯ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಸ್ಥಳಾಂತರಿಸುವ ಮೂಲಕ ಮತ್ತು ಎಲ್ಲಾ ಶಾಲಾ ಶಿಕ್ಷಕರಿಗೆ ಕನಿಷ್ಠ ಅರ್ಹತೆಯಾಗಿ ನಾಲ್ಕು ವರ್ಷಗಳ ಸಂಯೋಜಿತ ಬ್ಯಾಚುಲರ್ ಪದವಿಯನ್ನು ಸ್ಥಾಪಿಸುವ ಮೂಲಕ ಅವರಿಗೆ ವಿಷಯ, ಬೋಧನಾಕ್ರಮ ಮತ್ತು ಅಭ್ಯಾಸದಲ್ಲಿ ಉನ್ನತ ಗುಣಮಟ್ಟದ ತರಬೇತಿ ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

ಬೋಧನೆಯು ನೈತಿಕತೆ ಮತ್ತು ಬೌದ್ಧಿಕತೆಯನ್ನು ಬೇಡುವ ವೃತ್ತಿಯಾಗಿದೆ. ಹೊಸ ಶಿಕ್ಷಕರಿಗೆ ಕಠಿಣ ತಯಾರಿ ಬೇಕು, ಮತ್ತು ಅಭ್ಯಾಸ ಮಾಡುವ ಶಿಕ್ಷಕರಿಗೆ ನಿರಂತರ ವೃತ್ತಿಪರ ಅಭಿವೃದ್ಧಿ, ಶೈಕ್ಷಣಿಕ ಮತ್ತು ವೃತ್ತಿಪರ ಬೆಂಬಲ ಅಗತ್ಯ.

**ಎ.** 4 ವರ್ಷಗಳ ಸಂಯೋಜಿತ ಶಿಕ್ಷಣ ಪದವಿಯ ಕಾರ್ಯಕ್ರಮವನ್ನು ಬಹುಶಿಸ್ತಿನ ಸಂಸ್ಥೆಗಳಲ್ಲಿ ಪದವಿ ಕಾರ್ಯಕ್ರಮದಡಿಯಲ್ಲಿ ನೀಡಲಾಗುವುದು. ಇದರಲ್ಲಿ ವಿಷಯ ಮತ್ತು ಶಿಕ್ಷಕರ ಸಿದ್ಧತೆಯ ಕೋರ್ಸುಗಳು ಸೇರಿವೆ. ಇದು ಹಂತ-ನಿರ್ದಿಷ್ಟ, ವಿಷಯ-ನಿರ್ದಿಷ್ಟ ಕಾರ್ಯಕ್ರಮವಾಗಿದ್ದು, ಕಲೆ ಮತ್ತು ಕ್ರೀಡೆ ಸೇರಿದಂತೆ ಎಲ್ಲಾ ವಿಷಯಗಳಿಗೆ ಮತ್ತು ವೃತ್ತಿಪರ ಶಿಕ್ಷಣ ಅಥವಾ ವಿಶೇಷ ಶಿಕ್ಷಣದ ಗಮನವನ್ನು ಹೊಂದಿರುವ ಎಲ್ಲಾ ವಿಷಯಗಳಿಗೆ ಶಾಲಾಪೂರ್ವದಿಂದ ಪ್ರೌಢ ಹಂತದವರೆಗೆ (12ನೇ ತರಗತಿ) ಶಿಕ್ಷಕರನ್ನು ಸಿದ್ಧಪಡಿಸುತ್ತದೆ.

**ಬಿ.** 4 ವರ್ಷದ ಬಿ.ಎಡ್. ಪದವಿ ಇತರೆ ಪದವಿಗಳಿಗೆ ಸಮನಾಗಿರುತ್ತದೆ ಮತ್ತು 4 ವರ್ಷದ ಬಿ.ಎಡ್. ಪದವೀಧರರು ಸ್ನಾತಕೋತ್ತರ ಪದವಿ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

**ಸಿ.** ಪ್ರಸ್ತುತ ಎರಡು ವರ್ಷದ ಬಿ.ಎಡ್. ಕೋರ್ಸ್ 2030 ರವರೆಗೆ ಮುಂದುವರಿಯುತ್ತದೆ. 2030ರ ನಂತರ, 4 ವರ್ಷಗಳ ಶಿಕ್ಷಕರ ಶಿಕ್ಷಣ ಕೋರ್ಸನ್ನು ನೀಡುವ ಸಂಸ್ಥೆಗಳು ಮಾತ್ರ 2 ವರ್ಷದ ಕೋರ್ಸನ್ನು ನಡೆಸುತ್ತವೆ. ಈ ಕೋರ್ಸುಗಳನ್ನು ಪದವಿ ಪಡೆದವರಿಗೆ ನೀಡಲಾಗುತ್ತದೆ.

**ಡಿ.** 2030ರ ನಂತರ ಯಾವುದೇ ರೀತಿಯ ಸೇವಾಪೂರ್ವ ಶಿಕ್ಷಕರ ಸಿದ್ಧತೆ ಕೋರ್ಸುಗಳನ್ನು ನಡೆಸಲಾಗುವುದಿಲ್ಲ.

**ಇ.** ಶಿಕ್ಷಕರ ಶಿಕ್ಷಣವನ್ನು ಬಹುಶಿಸ್ತಿನ ಸಂಸ್ಥೆಗಳು ಮಾತ್ರ ನೀಡುತ್ತವೆ. ಉತ್ತಮ ಸೇವಾಪೂರ್ವ ಶಿಕ್ಷಕರ ತಯಾರಿಕೆಯಲ್ಲಿ ಶೈಕ್ಷಣಿಕ ದೃಷ್ಟಿಕೋನಗಳು, ವಿಷಯ ಮತ್ತು ಬೋಧನಾಕ್ರಮದದ ಪರಿಶ್ರಮದ ಸೈದ್ಧಾಂತಿಕ ತಿಳಿವಳಿಕೆ ಮತ್ತು ಬಲವಾದ ಸಿದ್ಧಾಂತ-ಅಭ್ಯಾಸದ ಸಂಪರ್ಕಕ್ಕಾಗಿ ವಿವಿಧ ವಿಭಾಗಗಳಲ್ಲಿ ಪರಿಣಿತಿಯ

ಅಗತ್ಯವಿರುತ್ತದೆ - ಇದು ಶಿಕ್ಷಣದ ಪ್ರಮುಖ ಕ್ಷೇತ್ರಗಳಲ್ಲಿ ಮತ್ತು ಇತರೆ ಎಲ್ಲಾ ಶಾಲಾ ವಿಷಯಗಳಲ್ಲಿ ಹಲವಾರು ಶ್ರೇಣಿಯ ತಜ್ಞರ ಪರಿಣಿತಿಯನ್ನು ಬಯಸುತ್ತದೆ.

**ಎಫ್.** ಗುಣಮಟ್ಟವಿಲ್ಲದ ಮತ್ತು ನಿಷ್ಕ್ರಿಯ ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲಾಗುವುದು.

# ವೃತ್ತಿಪರ ಶಿಕ್ಷಣ

## 1. ಉನ್ನತ ಶಿಕ್ಷಣದಲ್ಲಿ ವೃತ್ತಿಪರ ಶಿಕ್ಷಣವನ್ನು ಮರುಸಂಯೋಜಿಸುವುದು ಮತ್ತು ವೃತ್ತಿಪರ ಶಿಕ್ಷಣವನ್ನು ಪುನರುಜ್ಜೀವನಗೊಳಿಸುವುದು

**ಉದ್ದೇಶ:** ಉನ್ನತ ಗುಣಮಟ್ಟದ ವೃತ್ತಿಪರ ಸಾಮರ್ಥ್ಯಗಳ ಜೊತೆಗೆ ವಿಶಾಲ ಮನೋಭಾವದ ಸಾಮರ್ಥ್ಯಗಳ ಬೆಳವಣಿಗೆ ಮತ್ತು 21ನೇ ಶತಮಾನದ ಕೌಶಲಗಳ, ಸಾಮಾಜಿಕ ಮಾನವೀಯ ಸಂದರ್ಭದ ತಿಳಿವಳಿಕೆ ಮತ್ತು ಬಲವಾದ ನೈತಿಕ ದಿಕ್ಸೂಚಿಯನ್ನು ಖಾತರಿಪಡಿಸುವ ಮೂಲಕ ವೃತ್ತಿಪರರ ಸಿದ್ಧತೆಯಲ್ಲಿ ಸಮಗ್ರ ವ್ಯವಸ್ಥೆಯ ಬೆಳವಣಿಗೆ.

ವೃತ್ತಿಪರರ ಸಿದ್ಧತೆಯು ಸಾರ್ವಜನಿಕ ಉದ್ದೇಶದ ನೈತಿಕತೆ ಮತ್ತು ಪ್ರಾಮುಖ್ಯತೆಯ ಶಿಕ್ಷಣ, ವಿಷಯಗಳಲ್ಲಿ ಶಿಕ್ಷಣ, ಮತ್ತು ಅಭ್ಯಾಸಕ್ಕಾಗಿ ಶಿಕ್ಷಣವನ್ನು ಒಳಗೊಂಡಿರಬೇಕು - ಇದು ಸಂಭವಿಸಬೇಕಾದರೆ, ಔದ್ಯೋಗಿಕ ಶಿಕ್ಷಣವು ವಿಶೇಷತೆಯ ಪ್ರತ್ಯೇಕತೆಯಲ್ಲಿ ನಡೆಯಬಾರದು.

**ಎ.** ವೃತ್ತಿಪರ ಶಿಕ್ಷಣವು **ಒಟ್ಟಾರೆ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ**. ಸ್ವತಂತ್ರ ತಾಂತ್ರಿಕ ವಿಶ್ವವಿದ್ಯಾಲಯಗಳು, ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಗಳು, ಕಾನೂನು ಮತ್ತು ಕೃಷಿ ವಿಶ್ವವಿದ್ಯಾಲಯಗಳು ಅಥವಾ ಸಂಸ್ಥೆಗಳನ್ನು ಸ್ವತಂತ್ರವಾಗಿ ಸ್ಥಾಪಿಸುವ ಅಭ್ಯಾಸವನ್ನು ನಿಲ್ಲಿಸಲಾಗುವುದು. ವೃತ್ತಿಪರ ಅಥವಾ ಸಾಮಾನ್ಯ ಶಿಕ್ಷಣವನ್ನು ನೀಡುವ ಎಲ್ಲಾ ಸಂಸ್ಥೆಗಳು 2030ರ ವೇಳೆಗೆ ಸುವ್ಯವಸ್ಥಿತವಾಗಿ ಶಿಕ್ಷಣ ನೀಡುವ ಸಂಸ್ಥೆಗಳಾಗಿ ವಿಕಸನಗೊಳ್ಳಬೇಕು.

**ಬಿ.** **ಕೃಷಿ ಶಿಕ್ಷಣ** ಸಂಬಂಧಿತ ವಿಷಯದ ವಿಭಾಗಗಳೊಂದಿಗೆ ಪರಿಷ್ಕರಿಸಲಾಗುತ್ತದೆ. ಕೃಷಿ ವಿಶ್ವವಿದ್ಯಾಲಯಗಳು ದೇಶದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ 9%ರಷ್ಟು ಇದ್ದರೂ, ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಉನ್ನತ ಶಿಕ್ಷಣಕ್ಕೆ ದಾಖಲಾತಿ ಶೇಕಡಾ 1% ಕ್ಕಿಂತ ಕಡಿಮೆಯಿದೆ. ಉತ್ತಮ ನುರಿತ ಪದವೀಧರರು ಮತ್ತು ತಂತ್ರಜ್ಞರು, ನವೀನ ಸಂಶೋಧನೆ ಮತ್ತು ತಂತ್ರಜ್ಞಾನ ಮತ್ತು ಅಭ್ಯಾಸಗಳಿಗೆ ಸಂಬಂಧಿಸಿರುವ ಮಾರುಕಟ್ಟೆ ಆಧಾರಿತ ವಿಸ್ತರಣೆಯ ಮೂಲಕ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಕೃಷಿ ಮತ್ತು ಸಂಬಂಧಿತ ವಿಭಾಗಗಳ ಸಾಮರ್ಥ್ಯ ಮತ್ತು ಗುಣಮಟ್ಟ ಎರಡನ್ನೂ ಸುಧಾರಿಸುವುದು ಅಗತ್ಯವಾಗಿದೆ. ಸಾಮಾನ್ಯ ಶಿಕ್ಷಣದೊಂದಿಗೆ ಸಂಯೋಜಿಸಲಾದ ಕಾರ್ಯಕ್ರಮಗಳ ಮೂಲಕ ಕೃಷಿ ಮತ್ತು ಪಶುವೈದ್ಯಕೀಯ ವಿಜ್ಞಾನಗಳಲ್ಲಿ ವೃತ್ತಿಪರರನ್ನು ತಯಾರಿಸುವ **ಸಾಮರ್ಥ್ಯ** ತೀವ್ರವಾಗಿ ಹೆಚ್ಚಾಗುತ್ತದೆ. ಕ್ಷೀಣಿಸುತ್ತಿರುವ ಭೂ ಉತ್ಪಾದಕತೆ, ಹವಾಮಾನ ಬದಲಾವಣೆ, ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಸಮರ್ಪಕತೆ ಮುಂತಾದ ನಿರ್ಣಾಯಕ ವಿಷಯಗಳ ಬಗ್ಗೆ ಅರಿವು ಮೂಡಿಸುವಾಗ ಸ್ಥಳೀಯ ಜ್ಞಾನ, ಸಾಂಪ್ರದಾಯಿಕ ಜ್ಞಾನ ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಬಳಸುವ ಸಾಮರ್ಥ್ಯವನ್ನು ಹೊಂದಿರುವ ವೃತ್ತಿಪರರನ್ನು ಅಭಿವೃದ್ಧಿಪಡಿಸಲು ಕೃಷಿ ಶಿಕ್ಷಣದ ಸಂಪೂರ್ಣ ವಿನ್ಯಾಸವನ್ನು

ಬದಲಾಯಿಸಲಾಗುವುದು. ಕೃಷಿ ಶಿಕ್ಷಣವನ್ನು ನೀಡುವ ಸಂಸ್ಥೆಗಳು **ಸ್ಥಳೀಯ ಸಮುದಾಯಕ್ಕೆ** ನೇರವಾಗಿ ಪ್ರಯೋಜನವನ್ನು ನೀಡಬೇಕು; ತಂತ್ರಜ್ಞಾನದ ಅರಿವು ಮತ್ತು ಪ್ರಸರಣವನ್ನು ಉತ್ತೇಜಿಸಲು ಕೃಷಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸುವುದು ಒಂದು ವಿಧಾನವಾಗಿದೆ.

ಸಿ. **ಕಾನೂನು ಶಿಕ್ಷಣ** ಕಾರ್ಯಕ್ರಮಗಳನ್ನು ಪುನರ್ರಚಿಸಲಾಗುವುದು. ಕಾನೂನಿನಲ್ಲಿ ವೃತ್ತಿಪರ ಶಿಕ್ಷಣವು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬೇಕು. ಹೀಗಾಗಿ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ನ್ಯಾಯಯುತ ವಿಷಯಗಳು ವ್ಯಾಪಕತೆಯನ್ನು ಹೊಂದಿ ನ್ಯಾಯವನ್ನು ಸಮಯೋಚಿತವಾಗಿ ನೀಡಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಇದೇ ಸಮಯದಲ್ಲಿ, ಸಾಂವಿಧಾನಿಕ ಮೌಲ್ಯಗಳೊಂದಿಗೆ ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯದ ತಿಳಿವಳಿಕೆಯನ್ನು ನೀಡಬೇಕು ಮತ್ತು ಬೆಳಸಬೇಕು ಮತ್ತು ಪ್ರಜಾಪ್ರಭುತ್ವ, ಕಾನೂನಿನ ನಿಯಮ ಮತ್ತು ಮಾನವ ಹಕ್ಕುಗಳ ಸಾಧನಗಳ ಮೂಲಕ ರಾಷ್ಟ್ರದ ಪುನರ್ನಿರ್ಮಾಣದತ್ತ ನಿರ್ದೇಶಿಸಬೇಕು. **ಕಾನೂನು ಅಧ್ಯಯನಗಳ ಪಠ್ಯಕ್ರಮವು** ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳನ್ನು ಸಾಕ್ಷ್ಯ ಆಧಾರಿತ ರೀತಿಯಲ್ಲಿ ಪ್ರತಿಬಿಂಬಿಸಬೇಕು, ಕಾನೂನು ಚಿಂತನೆಯ ಇತಿಹಾಸ, ನ್ಯಾಯದ ತತ್ವಗಳು, ನ್ಯಾಯಶಾಸ್ತ್ರದ ಅಭ್ಯಾಸ ಮತ್ತು ಇತರೆ ಸಂಬಂಧಿತ ವಿಷಯಗಳು ಸೂಕ್ತ ಮತ್ತು ಸಮರ್ಪಕವಾಗಿ ಇರಬೇಕು.

ಕಾನೂನು ಶಿಕ್ಷಣವನ್ನು ನೀಡುವ ರಾಜ್ಯ ಸಂಸ್ಥೆಗಳು ಭವಿಷ್ಯದ ವಕೀಲರಿಗೆ ಮತ್ತು ನ್ಯಾಯಾಧೀಶರಿಗೆ ಕಾನೂನು ವಿಷಯಗಳನ್ನು ಇಂಗ್ಲಿಷ್ ಮತ್ತು ಆಯಾ ರಾಜ್ಯದ ಭಾಷೆಯ ಮೂಲಕ ದ್ವಿಭಾಷೆಯಲ್ಲಿ ಶಿಕ್ಷಣ ನೀಡುವುದನ್ನು ಪರಿಗಣಿಸಬೇಕು. ಇದರಿಂದಾಗಿ ಅನುವಾದದ ಅಗತ್ಯತೆಯ ಪರಿಣಾಮವಾಗಿ ಕಾನೂನು ಫಲಿತಾಂಶಗಳ ವಿಳಂಬವನ್ನು ನಿವಾರಿಸಬಹುದಾಗಿದೆ.

ಡಿ. **ಆರೋಗ್ಯಕಾಳಜಿ ಶಿಕ್ಷಣದ** ಮರುದೃಷ್ಟಿಕೋನ, ಅಂದರೆ ಶೈಕ್ಷಣಿಕ ಕಾರ್ಯಕ್ರಮಗಳ ಅವಧಿ, ರಚನೆ ಮತ್ತು ವಿನ್ಯಾಸವು ಜನರು ನಿರ್ವಹಿಸುವ ಕೆಲಸಗಳಿಗೆ ಅಗತ್ಯವಿರುವಷ್ಟಿದ್ದರೆ ಸಾಲದು. ಉದಾಹರಣೆಗೆ, ಪ್ರತಿ ಆರೋಗ್ಯಕಾಳಜಿ ಪ್ರಕ್ರಿಯೆ / ಹಸ್ತಕ್ಷೇಪಕ್ಕೆ (ಉದಾ. ಇಸಿಜಿ ಮಾಡುವುದು / ಓದುವುದು) ಸಂಪೂರ್ಣ ಅರ್ಹ ವೈದ್ಯರ ಅಗತ್ಯವಿಲ್ಲ. ಎಲ್ಲಾ ಎಮ್.ಬಿ.ಬಿ.ಎಸ್. ಪದವೀಧರರು ಇವುಗಳನ್ನು ಹೊಂದಿರಲೇಬೇಕು: (i) ವೈದ್ಯಕೀಯ ಕೌಶಲಗಳು (ii) ರೋಗನಿರ್ಣಯ ಕೌಶಲಗಳು (iii) ಶಸ್ತ್ರಚಿಕಿತ್ಸಾ ಕೌಶಲಗಳು ಮತ್ತು (iv) ತುರ್ತು ಕೌಶಲಗಳು. ಮೊದಲನೆಯದಾಗಿ ಪ್ರಾಥಮಿಕ ಆರೈಕೆ ಮತ್ತು ಮಾಧ್ಯಮಿಕ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಬೇಕಾದ ಕೌಶಲಗಳಿಗಾಗಿ ವಿದ್ಯಾರ್ಥಿಗಳಿಗೆ ಉತ್ತಮವಾಗಿ ವ್ಯಾಖ್ಯಾನಿಸಲಾದ ನಿಯತಾಂಕಗಳ ಮೂಲಕ ನಿಯಮಿತ ಅವಧಿಗಳ ಅಂತರದಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಎಂ.ಬಿ.ಬಿ.ಎಸ್. ಕೋರ್ಸಿನ **ಮೊದಲ ಅಥವಾ ಎರಡನೇ ವರ್ಷ ಎಲ್ಲಾ ವಿಜ್ಞಾನ ಪದವೀಧರರಿಗೆ ಸಾಮಾನ್ಯ ಅವಧಿಯಾಗಿ ವಿನ್ಯಾಸಗೊಳಿಸಲಾಗುವುದು**, ನಂತರ ಅವರು ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ನರ್ಸಿಂಗ್ ಅಥವಾ ಇತರೆ

ಸ್ಪೆಷಲೈಸೇಷನ್‌ಗಳನ್ನು ತೆಗೆದುಕೊಳ್ಳಬಹುದು. ಇತರೆ ವೈದ್ಯಕೀಯ ವಿಭಾಗಗಳಾದ ನರ್ಸಿಂಗ್, ದಂತ, ಇತ್ಯಾದಿ ಪದವೀಧರರಿಗೆ ಎಂಬಿಬಿಎಸ್ ಕೋರ್ಸಿಗೆ ಲ್ಯಾಟರಲ್ ಪ್ರವೇಶವನ್ನು ಸಹ ಅನುಮತಿಸಲಾಗುವುದು: ವೈದ್ಯಕೀಯ ಶಿಕ್ಷಣ ಅರ್ಹತಾ ಚೌಕಟ್ಟು ಇದಕ್ಕೆ ಅವಕಾಶ ಮಾಡಿಕೊಡಲಿದೆ. **ನರ್ಸಿಂಗ್ ಶಿಕ್ಷಣದ ಗುಣಮಟ್ಟವನ್ನು** ಸುಧಾರಿಸಲಾಗುವುದು; ನರ್ಸಿಂಗ್ ಮತ್ತು ಇತರ ಉಪ-ವಿಷಯಗಳಿಗಾಗಿ ರಾಷ್ಟ್ರೀಯ ಮಾನ್ಯತಾ ಸಂಸ್ಥೆಯನ್ನು ರಚಿಸಲಾಗುವುದು. ನಮ್ಮ ಜನರು **ಆರೋಗ್ಯಕಾಳಜಿಗೆ ಬಹುತ್ವ ಆಯ್ಕೆಗಳನ್ನು** ನಿರ್ವಹಿಸುತ್ತಿರುವುದರಿಂದ, ನಮ್ಮ ಆರೋಗ್ಯಕಾಳಜಿ ಶಿಕ್ಷಣ ವ್ಯವಸ್ಥೆಯು ಸಮಗ್ರವಾಗಿರಬೇಕು - ಇದರರ್ಥ, ಅಲೋಪತಿ ವೈದ್ಯಕೀಯ ಶಿಕ್ಷಣದ ಎಲ್ಲಾ ವಿದ್ಯಾರ್ಥಿಗಳು ಆಯುರ್ವೇದ, ಯೋಗ ಮತ್ತು ಪ್ರಕೃತಿಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ (ಆಯುಷ್) ಬಗ್ಗೆ ಮೂಲಭೂತ ತಿಳಿವಳಿಕೆಯನ್ನು ಹೊಂದಿರಬೇಕು. ಮತ್ತು ಪ್ರತಿಯಾಗಿ ಎಲ್ಲಾ ಆರೋಗ್ಯ ಶಿಕ್ಷಣದಲ್ಲಿ **ತಡೆಗಟ್ಟುವ ಆರೋಗ್ಯಕಾಳಜಿ ಮತ್ತು ಸಮುದಾಯ ಔಷಧ** ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು.

**ಇ.** ತಾಂತ್ರಿಕ ಶಿಕ್ಷಣವು ನಿರ್ದಿಷ್ಟ ಸವಾಲುಗಳನ್ನು ಎದುರಿಸುತ್ತಿದೆ, ಏಕೆಂದರೆ ಈ ವಿಭಾಗಗಳು ಸಂಪೂರ್ಣವಾಗಿ ಜ್ಞಾನ ಆಧಾರಿತ ಅಥವಾ ಸಂಪೂರ್ಣವಾಗಿ ಕೌಶಲ ಆಧಾರಿತವಾಗಿಲ್ಲ. ಇದಲ್ಲದೆ, ಎಲ್ಲಾ ಮಾನವ ಪ್ರಯತ್ನಗಳ ಮೇಲೆ ತಂತ್ರಜ್ಞಾನದ ಪ್ರಭಾವ ಹೆಚ್ಚಾದಂತೆ, ತಾಂತ್ರಿಕ ಶಿಕ್ಷಣ ಮತ್ತು ಇತರ ವಿಭಾಗಗಳ ನಡುವಿನ ಸಂಪರ್ಕ ಕಡಿಮೆಯಾಗುವ ನಿರೀಕ್ಷೆಯಿದೆ. ಮುಂದುವರಿಯುತ್ತಾ, ಈ ಕ್ಷೇತ್ರಗಳು ಹಲವಾರು ದಶಕಗಳವರೆಗೆ ಉತ್ತಮ, ಅರ್ಹ ವ್ಯಕ್ತಿಗಳ ಬೇಡಿಕೆಯನ್ನು ಮುಂದುವರಿಸುವುದಲ್ಲದೆ, ನಾವೀನ್ಯತೆ ಮತ್ತು ಸಂಶೋಧನೆಗೆ ಹೆಚ್ಚು ಮಹತ್ವ ನೀಡಲು ಮತ್ತು ಉದ್ಯಮ ಮತ್ತು ಸಂಸ್ಥೆಗಳ ನಡುವೆ ನಿಕಟ ಸಹಯೋಗವನ್ನು ಕಲ್ಪಿಸುವ ಅಗತ್ಯವಿರುತ್ತದೆ. ಪ್ರಸ್ತುತ ಮತ್ತು ಭವಿಷ್ಯದ ಅಭ್ಯಾಸಗಳಿಗಾಗಿ ಉತ್ತಮವಾಗಿ ಸಿದ್ಧರಾಗಿರುವ ವೃತ್ತಿಪರರನ್ನು ತಯಾರಿಸಲು ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ **ಕೋರ್ಸುಗಳನ್ನು ಪರಿಷ್ಕರಿಸಲಾಗುವುದು**, ಇದರಿಂದ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಪರಿಸರ ಸಂದರ್ಭಗಳಿಗೆ ಸ್ಪಂದಿಸುವಾಗ ಉದಯೋನ್ಮುಖ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಲ್ಲಿ ತಮ್ಮ ಜ್ಞಾನ ಮತ್ತು ಕೌಶಲಗಳನ್ನು ವಿಭಿನ್ನ, ಆಗಾಗ್ಗೆ ಅಪರಿಚಿತ ಸಂದರ್ಭಗಳಲ್ಲಿ ಅನ್ವಯಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಮತ್ತು ವೃತ್ತಿಪರ ಮನೋಭಾವ ಮತ್ತು ನೈತಿಕತೆಯನ್ನು ಬೆಳೆಸಲು **ಪಠ್ಯಕ್ರಮವನ್ನು ನವೀಕರಿಸಲಾಗುತ್ತದೆ. ಹೊಸ ಮತ್ತು ಉದಯೋನ್ಮುಖ ವಿಷಯಗಳ** ಮೇಲೆ ಕಾರ್ಯತಂತ್ರದ ಒತ್ತಡ ಇರುತ್ತದೆ, ಉದಾ. ಕೃತಕ ಬುದ್ಧಿಮಟ್ಟ, ದೊಡ್ಡ ದತ್ತಾಂಶ ವಿಶ್ಲೇಷಣೆ ಇತ್ಯಾದಿ.

ಸಂಸ್ಥೆಗಳ ಮಾನ್ಯತೆ / ಶ್ರೇಯಾಂಕವು ಉದ್ಯಮದ ಸಹಯೋಗ, ಉದ್ಯಮದ ಅನುಭವ ಹೊಂದಿರುವ ಅಧ್ಯಾಪಕರು, ವರ್ಧಿತ ಇಂಟರ್ನ್‌ಶಿಪ್ ಅವಕಾಶಗಳು ಇತ್ಯಾದಿಗಳನ್ನು **ಉತ್ತೇಜಿಸುತ್ತದೆ**.

# ರಾಷ್ಟ್ರೀಯ ಸಂಶೋಧನಾ ಸಂಸ್ಥೆ

## 1. ಗುಣಮಟ್ಟದ ಶೈಕ್ಷಣಿಕ ಸಂಶೋಧನೆಯ ವೇಗವರ್ಧನೆ

**ಉದ್ದೇಶ:** ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳಲ್ಲಿ ಸಂಶೋಧನೆಯನ್ನು ಹೆಚ್ಚಿಸುವ ಬಗ್ಗೆ ವಿಶೇಷ ಗಮನಹರಿಸಿ, ದೇಶಾದ್ಯಂತ ಎಲ್ಲಾ ಶೈಕ್ಷಣಿಕ ವಿಭಾಗಗಳಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳನ್ನು ವೇಗವರ್ಧಿಸಿ ಮತ್ತು ಶಕ್ತಿಯುತಗೊಳಿಸಬೇಕು. ಸ್ಪರ್ಧಾತ್ಮಕವಾದ ವರಿಷ್ಠರಿಂದ ಪರಿಷ್ಕರಿಸಿದ ಅನುದಾನ, ಮಾರ್ಗದರ್ಶನ ಮತ್ತು ಸೌಲಭ್ಯಗಳ ಮೂಲಕ ಸಂಶೋಧನೆಗೆ ಅನುಕೂಲಕರ ಪರಿಸರವನ್ನು ನಿರ್ಮಾಣ ಮಾಡುವುದು.

ಉನ್ನತ ಹಂತದ ನಾವೀನ್ಯತೆಯ ಆರ್ಥಿಕತೆಯನ್ನು ಬೆಳೆಸಲು ಮತ್ತು ಉಳಿಸಿಕೊಳ್ಳಲು, ಸಮಾಜವನ್ನು ಉನ್ನತೀಕರಿಸಲು ಮತ್ತು ಹೆಚ್ಚಿನ ಉನ್ನತಮಟ್ಟವನ್ನು ಸಾಧಿಸಲು ರಾಷ್ಟ್ರವು ಸಂಶೋಧನೆ ಮತ್ತು ನಾವೀನ್ಯತೆ ಬಹು ಮುಖ್ಯವಾಗಿವೆ. ಇಂದು ಜಗತ್ತಿನಲ್ಲಿ ಆಗುತ್ತಿರುವ ತ್ವರಿತ ಹವಾಮಾನ, ತಂತ್ರಜ್ಞಾನ, ಜನಸಂಖ್ಯಾ ಬದಲಾವಣೆಗಳಿಂದಾಗಿ ಈ ರೀತಿಯ ಬೃಹತ್ ಸಂಶೋಧನಾ ವ್ಯವಸ್ಥೆ ಎಂದಿಗಿಂತಲೂ ಹೆಚ್ಚು ಮುಖ್ಯವಾಗಿರುತ್ತದೆ.

**ಎ.** ರಾಷ್ಟ್ರೀಯ ಸಂಶೋಧನಾ ಸಂಸ್ಥೆಯನ್ನು ಸಂಸತ್ತಿನ ಕಾಯಿದೆಯ ಮೂಲಕ ಭಾರತ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲಾಗುವುದು. ಇದಕ್ಕೆ ವಾರ್ಷಿಕ ರೂ. 20,000 ಕೋಟಿ (ಜಿಡಿಪಿಯ ~0.1 ಶೇಕಡ) ನೀಡಲಾಗುತ್ತದೆ; ಗುಣಮಟ್ಟದ ಸಂಶೋಧನೆಗೆ ದೇಶದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿದಂತೆ ಮುಂದಿನ ದಶಕದಲ್ಲಿ ಇದನ್ನು ಹಂತಹಂತವಾಗಿ ಹೆಚ್ಚಿಸಲಾಗುವುದು.

**ಬಿ.** ಸಂಸ್ಥೆಯು ಪ್ರಾಥಮಿಕ ಕಾರ್ಯವು ಈ ಕೆಳಕಂಡವುಗಳನ್ನು ಒಳಗೊಂಡಿದೆ.

- ಸ್ಪರ್ಧಾತ್ಮಕತೆ, ವರಿಷ್ಠರಿಂದ ಪರಿಷ್ಕರಣೆಗೊಂಡಿರುವ ಪ್ರಕ್ರಿಯೆಯ ಆಧಾರ ಮೇಲೆ ಎಲ್ಲಾ ವಿಭಾಗಗಳಲ್ಲಿ ಶೈಕ್ಷಣಿಕ ಬೆಳವಣಿಗೆಗಾಗಿ ಸಂಶೋಧನೆಗೆ ಧನಸಹಾಯ ಮಾಡುವುದು.
- ದೇಶಾದ್ಯಂತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಂಶೋಧನಾ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸುವುದು.
- ಅತ್ಯಂತ ತುರ್ತು ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಸಂಶೋಧಕರು, ಸರ್ಕಾರ ಮತ್ತು ಉದ್ಯಮಗಳ ನಡುವೆ ಪ್ರಯೋಜನಕಾರಿ ಸಂಪರ್ಕಗಳನ್ನು ಏರ್ಪಡಿಸುವುದು ಮತ್ತು ಸಾರ್ವಜನಿಕ ಒಳಿತಿಗಾಗಿ ಇತ್ತೀಚಿನ ಸಂಶೋಧನಾ ಪ್ರಗತಿಗಳನ್ನು ಜಾರಿಗೆ ತರುವುದು.
- ವಿಶೇಷ ಪ್ರಶಸ್ತಿ ಮತ್ತು ವಿಚಾರಸಂಕಿರಣಗಳ ಮೂಲಕ ಅತ್ಯುತ್ತಮ ಸಂಶೋಧನೆಗಳನ್ನು ಗುರುತಿಸುವುದು

**ಸಿ.** ಈ ಸಂಸ್ಥೆಯು ಪ್ರಾರಂಭಿಕವಾಗಿ ನಾಲ್ಕು ಪ್ರಮುಖ ವಿಭಾಗಗಳನ್ನು ಹೊಂದಿರುತ್ತದೆ. - ವಿಜ್ಞಾನ, ತಂತ್ರಜ್ಞಾನ, ಸಾಮಾಜ ವಿಜ್ಞಾನ ಮತ್ತು ಕಲೆ ಮತ್ತು ಮಾನವಿಕಗಳು.

# ಹೆಚ್ಚು ಗಮನಹರಿಸಬೇಕಾದ ಕ್ಷೇತ್ರಗಳು

## 1. ಶಿಕ್ಷಣ ತಂತ್ರಜ್ಞಾನ

**ಉದ್ದೇಶ:** ಶಿಕ್ಷಕರ ಸಿದ್ಧತೆ ಮತ್ತು ಅಭಿವೃದ್ಧಿಯನ್ನು ಬೆಂಬಲಿಸಲು; ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳನ್ನು ಸುಧಾರಿಸಲು; ಅನನುಕೂಲಕರ ಗುಂಪುಗಳ ಶೈಕ್ಷಣಿಕ ಪ್ರವೇಶವನ್ನು ಹೆಚ್ಚಿಸಲು; ಮತ್ತು ಶೈಕ್ಷಣಿಕ ಯೋಜನೆ, ಆಡಳಿತ ಮತ್ತು ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸಲು ಶಿಕ್ಷಣದ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನದ ಸೂಕ್ತ ಸಂಯೋಜನೆ ಅಗತ್ಯವಾಗಿದೆ.

ತಂತ್ರಜ್ಞಾನವು ಎಲ್ಲಾ ಹಂತದ ಶಿಕ್ಷಣದೊಂದಿಗೆ ಸೂಕ್ತವಾಗಿ ಸಂಯೋಜಿಸಲ್ಪಟ್ಟಿದೆ ಎಂಬುದನ್ನು ನೋಡುವುದು ಈ ನೀತಿಯ ಉದ್ದೇಶವಾಗಿದೆ, ಅವುಗಳೆಂದರೆ, i) ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳನ್ನು ಸುಧಾರಿಸುವಿಕೆ; ii) ಶಿಕ್ಷಕರ ತಯಾರಿಕೆ ಮತ್ತು ಅವರ ನಿರಂತರ ವೃತ್ತಿಪರ ಅಭಿವೃದ್ಧಿಗೆ ಬೆಂಬಲ ನೀಡುವಿಕೆ; iii) ಅನನುಕೂಲಕರ ಗುಂಪುಗಳ ಶೈಕ್ಷಣಿಕ ಪ್ರವೇಶವನ್ನು ಹೆಚ್ಚಿಸುವಿಕೆ ಮತ್ತು iv) ಶೈಕ್ಷಣಿಕ ಯೋಜನೆ, ಆಡಳಿತ ಮತ್ತು ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸುವುದು.

ಎ. ರಾಷ್ಟ್ರೀಯ ಶಿಕ್ಷಣ ತಂತ್ರಜ್ಞಾನ ವೇದಿಕೆಯನ್ನು (National Educational Technology Forum) ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲಾಗುವುದು. ಇಲ್ಲಿ ಶಿಕ್ಷಣ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮತ್ತು ಇತರೆ ಪಾಲುದಾರಿಕೆ ಸಂಸ್ಥೆಗಳು ಇತ್ತೀಚಿನ ಜ್ಞಾನ ಮತ್ತು ಸಂಶೋಧನೆಗಳಿಗೆ ಮುಂದಾಳತ್ವವನ್ನು ನೀಡುವ ಮೂಲಕ ತಂತ್ರಜ್ಞಾನದ ಪ್ರಚೋದನೆ, ನಿಯೋಜನೆ ಮತ್ತು ಬಳಕೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಅನುಕೂಲವಾಗುವಂತೆ, ಹಾಗೆಯೇ ಪರಸ್ಪರ ಉತ್ತಮ ಅಭ್ಯಾಸಗಳನ್ನು ಸಮಾಲೋಚಿಸಲು ಮತ್ತು ಹಂಚಿಕೊಳ್ಳಲು ಅವಕಾಶವಿರಲಿದೆ.

ಬಿ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ತಂತ್ರಜ್ಞಾನದ ಸಂಯೋಜನೆ (ಉದಾ. ಬೆಂಬಲ ಅನುವಾದ, ಶಿಕ್ಷಣ ಬೊಧನಾಕ್ರಮದ ಕಾರ್ಯನಿರ್ವಹಣೆ, ನಿರಂತರ ವೃತ್ತಿಪರ ಅಭಿವೃದ್ಧಿಗೆ ಅನುಕೂಲವಾಗುವ ಆನ್‌ಲೈನ್ ಕೋರ್ಸುಗಳು ಇತ್ಯಾದಿ.) ಸಮೂಹ ರಾಷ್ಟ್ರೀಯ ಭಂಡಾರಗಳು, ತಂತ್ರಜ್ಞಾನವನ್ನು ಬಳಸಲು ಶಿಕ್ಷಕರ ತಯಾರಿ, ಅರ್ಹ ಬೆಂಬಲ ಮತ್ತು ಸಂಶೋಧನಾ ಕೇಂದ್ರಗಳ ಮೂಲಕ ಉತ್ತಮಗೊಳಿಸಲಾಗುತ್ತದೆ. ತಂತ್ರಜ್ಞಾನದ ಸಂಶೋಧನೆ ಮತ್ತು ಬೆಂಬಲದ ಬಳಕೆಯನ್ನು ಕೈಗೊಳ್ಳಲು ಶೈಕ್ಷಣಿಕ ತಂತ್ರಜ್ಞಾನದಲ್ಲಿ ಶ್ರೇಷ್ಠತೆಯ ಕೇಂದ್ರಗಳನ್ನು (Centres of Excellence in Educational Technology) ಸ್ಥಾಪಿಸಲಾಗುವುದು.

ಸಿ. ಶೈಕ್ಷಣಿಕ ದತ್ತಾಂಶದ ರಾಷ್ಟ್ರೀಯ ಭಂಡಾರ ಸಂಸ್ಥೆಗಳು (National Repository of Educational Data), ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ನಿರ್ವಹಿಸುತ್ತದೆ.

## 2. ಔದ್ಯೋಗಿಕ ಶಿಕ್ಷಣ

**ಉದ್ದೇಶ:** ಔದ್ಯೋಗಿಕ ಶಿಕ್ಷಣವನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಸಂಯೋಜಿಸುವುದು - ಅಂದರೆ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ 2025 ರ ವೇಳೆಗೆ ಶೇಕಡಾ 50 ರಷ್ಟು ಎಲ್ಲ ಶಿಕ್ಷಣಾರ್ಥಿಗಳಿಗೂ ಔದ್ಯೋಗಿಕ ಶಿಕ್ಷಣಕ್ಕೆ ಪ್ರವೇಶವನ್ನು ಒದಗಿಸುವುದು.

ಈ ನೀತಿಯು ಭಾರತದ ಜನಸಂಖ್ಯಾ ಲಾಭಾಂಶದ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳುವ ಸಲುವಾಗಿ 2025ರ ವೇಳೆಗೆ ಶಾಲಾ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ಮೂಲಕ ಕನಿಷ್ಠ ಶೇಕಡಾ 50ರಷ್ಟು ಶಿಕ್ಷಣಾರ್ಥಿಗಳಲ್ಲಿ ಕೌಶಲಭಿವೃದ್ಧಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

**ಎ.** ಮುಂದಿನ ದಶಕದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಹಂತಹಂತವಾಗಿ **ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ಸಂಯೋಜಿಸಲಾಗುವುದು**. ಕೌಶಲಗಳ ಅಂತರ ವಿಶ್ಲೇಷಣೆ ಮತ್ತು ಸ್ಥಳೀಯ ಅವಕಾಶಗಳ ಯೋಜನೆಯನ್ನು ಆಧರಿಸಿ ಮುಖ್ಯ ಕ್ಷೇತ್ರಗಳನ್ನು ಆಯ್ಕೆ ಮಾಡಲಾಗುತ್ತದೆ ಹಾಗೂ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣವು ಉದಾರ ಶಿಕ್ಷಣದ ದೂರದೃಷ್ಟಿಯ ಭಾಗವಾಗಿರುತ್ತದೆ. ಔದ್ಯೋಗಿಕ ಶಿಕ್ಷಣದ ಏಕೀಕರಣಕ್ಕಾಗಿ ರಾಷ್ಟ್ರೀಯ ಸಮಿತಿಯು (National Committee for the Integration of Vocational Education) ಈ ಪ್ರಯತ್ನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತದೆ.

**ಬಿ.** ಈ **ಪರಿವರ್ತನೆಯು**, ಸಮನ್ವಯತೆಗಾಗಿ ಒಂದು ಪ್ರತ್ಯೇಕ ನಿಧಿಯನ್ನು ಸ್ಥಾಪಿಸುವ ಮೂಲಕ ಶಿಕ್ಷಣ ಸಂಸ್ಥೆಗಳು, ತಾಂತ್ರಿಕ ಸಂಸ್ಥೆಗಳು ಹಾಗೂ ಉದ್ಯಮ ಇವುಗಳ **ಸಹಯೋಗದ** ಮೂಲಕ ಸಹಕಾರದ ಸೌಲಭ್ಯವನ್ನು ಕಲ್ಪಿಸಲಾಗುವುದು.

**ಸಿ.** **ರಾಷ್ಟ್ರೀಯ ಕೌಶಲಗಳ ಅರ್ಹತೆಗಳ ಚೌಕಟ್ಟನ್ನು** (National Skills Qualifications Framework) ಪ್ರತಿಯೊಂದು ವಿಷಯಗಳಿಗೆ/ಉದ್ಯೋಗ/ವೃತ್ತಿಗಳಿಗೆ ಸಂಬಂಧಿಸಿದಂತೆ ಮತ್ತಷ್ಟು ವಿವರಗಳನ್ನು ಹೊಂದಿರುತ್ತದೆ. ಇದಕ್ಕಿಂತಲೂ ಹೆಚ್ಚಾಗಿ, ಭಾರತೀಯ ಮಾನದಂಡಗಳನ್ನು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ನಡೆಸಿಕೊಂಡು ಬರುವ ಉದ್ಯೋಗಗಳ ಅಂತರರಾಷ್ಟ್ರೀಯ ಪ್ರಮಾಣಿತ ವರ್ಗೀಕರಣದೊಂದಿಗೆ ಹೊಂದಿಸಲಾಗುತ್ತದೆ. ಈ ಚೌಕಟ್ಟು **ಪೂರ್ವ ಕಲಿಕಾ ಗುರುತಿಸುವಿಕೆಗೆ** ಆಧಾರವನ್ನು ಒದಗಿಸುತ್ತದೆ. ಈ ಮೂಲಕ ಸಂಬಂಧಪಟ್ಟ ಮೂಲಚೌಕಟ್ಟಿನ ಮಟ್ಟದೊಂದಿಗೆ ತಮ್ಮ ಪ್ರಾಯೋಗಿಕ ಅನುಭವವನ್ನು ಹೊಂದಿಸಿಕೊಳ್ಳುವ ಮುಖಾಂತರ ಔಪಚಾರಿಕ ವ್ಯವಸ್ಥೆಯಿಂದ ಹೊರಹೋಗುವಿಕೆಯನ್ನು ಮರು ಸಂಘಟಿಸಲಾಗುತ್ತದೆ.

**ಡಿ.** **ಪದವಿಪೂರ್ವ ಹಂತ**ದಲ್ಲಿ ಔದ್ಯೋಗಿಕ ಶಿಕ್ಷಣವು **2030-35**ರ ವೇಳೆಗೆ ದಾಖಲಾತಿಯ ಶೇಕಡಾ 50ರಷ್ಟನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ಔದ್ಯೋಗಿಕ ಶಿಕ್ಷಣವನ್ನು ತಾವೇ ಸ್ವತಃ ಅಥವಾ ಉದ್ಯಮದ ಸಹಭಾಗಿತ್ವದಲ್ಲಿ ನೀಡಬಹುದು.

**ಇ.** ಔದ್ಯೋಗಿಕ ಶಿಕ್ಷಣ ಮತ್ತು ಅಪ್ರೆಂಟಿಶಿಪ್ (ಕೆಲಸ ಕಲಿಯುವ ಸಮಯ) ನೀಡುವ ಸಂದರ್ಭದಲ್ಲಿ ಉಪಯೋಗಿಸುವ **ಮಾದರಿಗಳನ್ನು** ಉನ್ನತ ಶಿಕ್ಷಣ ಸಂಸ್ಥೆಗಳೂ ಸಹ ಪ್ರಯೋಗಿಸಬಹುದು. ಕೈಗಾರಿಕೆಗಳ ಸಹಭಾಗಿತ್ವದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮನವರಿಕೆ ಅಥವಾ ಚಿಂತನಶೀಲ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

**ಎಫ್.** **'ಲೋಕ ವಿದ್ಯೆ'ಯು** ಭಾರತದಲ್ಲಿ ಅಭಿವೃದ್ಧಿಪಡಿಸಿದ ಜ್ಞಾನವನ್ನು ಔದ್ಯೋಗಿಕ ಶಿಕ್ಷಣದ ಕೋರ್ಸುಗಳಲ್ಲಿ ಒಟ್ಟಿಗೆ ತರುವುದರ ಮೂಲಕ ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡಲಾಗುತ್ತದೆ.

## 3. ವಯಸ್ಕರ ಶಿಕ್ಷಣ

**ಉದ್ದೇಶ:** 2030 ರ ವೇಳೆಗೆ ಶೇಕಡಾ 100ರಷ್ಟು ಯುವ ಮತ್ತು ವಯಸ್ಕರ ಸಾಕ್ಷರತೆಯ ಪ್ರಮಾಣವನ್ನು ಸಾಧಿಸುವುದು ಮತ್ತು ವಯಸ್ಕರ ಶಿಕ್ಷಣ ಹಾಗೂ ಮುಂದುವರಿಕೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಗಮನಾರ್ಹವಾಗಿ ವಿಸ್ತರಿಸುವುದು.

ಸಾಕ್ಷರತೆ ಅಥವಾ ಮೂಲಶಿಕ್ಷಣವು ನಾಗರಿಕವಾಗಿ, ಆರ್ಥಿಕವಾಗಿ ಮತ್ತು ಜೀವಮಾನದ ಕಲಿಕೆಗೆ ಇರುವ ಅವಕಾಶಗಳಲ್ಲಿ ವೈಯಕ್ತಿಕವಾಗಿ ಭಾಗವಹಿಸಿ, ಸಕ್ರಿಯಗೊಳ್ಳಲು ಸಾಧ್ಯವಾಗುವಂತೆ ಅನುವು ಮಾಡಿಕೊಡುತ್ತದೆ. ಇದು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದೆ. ಇಷ್ಟಾದರೂ, ನಂಬಲು ಸಾಧ್ಯವಿಲ್ಲದಷ್ಟು ಪ್ರಮಾಣದ ನಮ್ಮ ಯುವ ಮತ್ತು ವಯಸ್ಕರ ಜನಸಂಖ್ಯೆಯು ಇನ್ನೂ ಸಾಕ್ಷರರಾಗದೆ ಉಳಿದಿದ್ದಾರೆ ಎನ್ನಬಹುದು.

**ಎ.** **ಮೂಲಭೂತ** ಅಕ್ಷರಜ್ಞಾನ ಮತ್ತು ಗಣಿತಜ್ಞಾನ, ನಿರ್ಣಾಯಕ ಜೀವನ ಕೌಶಲ್ಯಗಳು, ಔದ್ಯೋಗಿಕ ಕೌಶಲಗಳು, ಮೂಲ ಶಿಕ್ಷಣ ಮತ್ತು ಮುಂದುವರಿದ ಶಿಕ್ಷಣದಂತಹ ಐದು ವಿಶಾಲ ಕ್ಷೇತ್ರಗಳನ್ನು ಒಳಗೊಂಡಂತೆ ವಯಸ್ಕರ ಶಿಕ್ಷಣಕ್ಕಾಗಿ ಒಂದು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಅಭಿವೃದ್ಧಿಪಡಿಸಲಾಗುವುದು. ಮೌಲ್ಯಮಾಪನ ಹಾಗೂ ಪ್ರಮಾಣೀಕರಣ ಮಾನದಂಡಗಳೊಂದಿಗೆ ಪಠ್ಯಪುಸ್ತಕಗಳು ಮತ್ತು ಕಲಿಕಾ ಸಾಮಗ್ರಿಗಳನ್ನು ಈ ಚೌಕಟ್ಟಿಗೆ ಹೊಂದಿಸಿ ಅಭಿವೃದ್ಧಿಪಡಿಸಲಾಗುತ್ತದೆ.

**ಬಿ.** ವಯಸ್ಕರ ಶಿಕ್ಷಣ ಕೇಂದ್ರದ ವ್ಯವಸ್ಥಾಪಕರು ಮತ್ತು ಬೋಧಕರು ನೀಡಿರುವ ಒಂದು **ಕೇಡರ್**, ಹಾಗೆಯೇ ರಾಷ್ಟ್ರೀಯ ವಯಸ್ಕರ ಶಿಕ್ಷಣ ಬೋಧಕರ ಕಾರ್ಯಕ್ರಮದ (National Adult Education Tutors Programme) ಮೂಲಕ ರಚಿಸಲಾದ ಪರಸ್ಪರರಿಗೋಸ್ಕರ ಇರುವ ಬೋಧಕರ ದೊಡ್ಡ ತಂಡವು ವಯಸ್ಕರ ಶಿಕ್ಷಣವನ್ನು ಬೋಧಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

**ಸಿ.** ಅಸ್ತಿತ್ವದಲ್ಲಿರುವ **ವಿಧಾನಗಳು ಮತ್ತು ಕಾರ್ಯಕ್ರಮಗಳು** ಭಾಗವಹಿಸುವವರನ್ನು ಗುರುತಿಸಿ, ನಿಯಂತ್ರಣಕ್ಕೆ ತರುವುದಲ್ಲದೆ, ಸಮುದಾಯದ ಸ್ವಯಂಸೇವಕರನ್ನು ಪ್ರೋತ್ಸಾಹಿಸುತ್ತವೆ - ಸಮುದಾಯದ ಪ್ರತಿಯೊಬ್ಬ ಸಾಕ್ಷರ ಸದಸ್ಯನೂ ಕನಿಷ್ಟಪಕ್ಷ ಒಬ್ಬ ವ್ಯಕ್ತಿಗಾದರೂ ಓದಲು ಕಲಿಸುವುದು ಇವುಗಳ ಒಂದು ಪ್ರಮುಖ ತಂತ್ರವಾಗಿದೆ. ಇವುಗಳ ಮೂಲಕ **ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರಲ್ಲಿ ಜಾಗೃತಿ** ಮೂಡಿಸಲಾಗುವುದು. ಜೊತೆಗೆ ಇಲ್ಲಿ **ಮಹಿಳೆಯರ ಸಾಕ್ಷರತೆಗೆ** ವಿಶೇಷ ಒತ್ತು ನೀಡಲಾಗುವುದು.

## 4. ಭಾರತೀಯ ಭಾಷೆಗಳ ಉತ್ತೇಜನ

**ಉದ್ದೇಶ:** ಎಲ್ಲಾ ಭಾರತೀಯ ಭಾಷೆಗಳನ್ನು ಸಂರಕ್ಷಿಸಿ, ಅವುಗಳ ಬೆಳವಣಿಗೆ ಮತ್ತು ಜೀವಂತಿಕೆಯನ್ನು ಕಾಪಾಡುವುದನ್ನು ಈ ನೀತಿಯ ಖಾತರಿಪಡಿಸುತ್ತದೆ.

ಪ್ರತಿ ಪ್ರದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳ ನಿಜವಾದ ಸೇರ್ಪಡೆ ಮತ್ತು ಸಂರಕ್ಷಣೆಗಾಗಿ, ಬುಡಕಟ್ಟು ಭಾಷೆಗಳೂ ಸೇರಿದಂತೆ, ಎಲ್ಲಾ ಭಾರತೀಯ ಭಾಷೆಗಳಿಗೆ ಸೂಕ್ತವಾದ ಗೌರವವನ್ನು ನೀಡಿದಾಗ ಮಾತ್ರವೇ ಶಾಲೆಗಳಲ್ಲಿನ ಎಲ್ಲ ವಿದ್ಯಾರ್ಥಿಗಳಿಂದ ಈ ಅಂಶಗಳ ಬಗ್ಗೆ ನಿಜವಾದ ತಿಳಿವಳಿಕೆಯನ್ನು ನಿರೀಕ್ಷಿಸಿ, ಸಾಧಿಸಬಹುದು. ಆದರೂ ಕೂಡ ಭಾರತದ ನಿಜವಾದ ಶ್ರೀಮಂತ ಭಾಷೆಗಳು ಮತ್ತು ಅವುಗಳ ಸಾಹಿತ್ಯವನ್ನು ಸಂರಕ್ಷಿಸುವುದು ಖಂಡಿತವಾಗಿಯೂ ಸವಾಲಿನ ಕಾರ್ಯವೇ ಆಗಿದೆ.

**ಎ.** ದೇಶಾದ್ಯಂತ ಭಾರತೀಯ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಹಾಗೂ ಶಿಕ್ಷಕ ಮತ್ತು ಅಧ್ಯಾಪಕರ ನೇಮಕಾತಿ, ಕೇಂದ್ರೀಕೃತ ಸಂಶೋಧನೆ ಹಾಗೂ ಶಾಸ್ತ್ರೀಯ ಭಾಷೆಗಳನ್ನು ಅಭಿವೃದ್ಧಿಪಡಿಸುವುದರ ಮೂಲಕ ಭಾಷೆ, ಸಾಹಿತ್ಯ, ಭಾರತೀಯ ಭಾಷೆಗಳಲ್ಲಿ ವೈಜ್ಞಾನಿಕ ಶಬ್ದಕೋಶವನ್ನು ಕೇಂದ್ರೀಕರಿಸಿ, ಸಕ್ರಿಯಗೊಳಿಸಲಾಗುವುದು.

**ಬಿ.** ಶಾಸ್ತ್ರೀಯ ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಸಂಸ್ಥೆಗಳು ಬಲಗೊಳಿಸಲಾಗುವುದು. ಪಾಲಿ, ಪರ್ಷಿಯನ್ ಮತ್ತು ಪ್ರಾಕೃತ ಭಾಷೆಗಳಿಗಾಗಿ ರಾಷ್ಟ್ರೀಯ ಸಂಸ್ಥೆಯನ್ನೂ ಸ್ಥಾಪಿಸಲಾಗುವುದು.

**ಸಿ.** ವೈಜ್ಞಾನಿಕ ಮತ್ತು ತಾಂತ್ರಿಕ ಪರಿಭಾಷೆಯ ಆಯೋಗದ (Commission for Scientific and Technical Terminology) ಕೆಲಸವು ಮುಖ್ಯವಾಗಿ ದೇಶಾದ್ಯಂತ ಬಳಕೆಗಾಗಿ ಏಕರೂಪದ ಶಬ್ದಕೋಶವನ್ನು ಅಭಿವೃದ್ಧಿಪಡಿಸುವುದು. ಅಂದರೆ ಭೌತಿಕ ವಿಜ್ಞಾನಗಳು ಮಾತ್ರವಲ್ಲದೆ, ಎಲ್ಲಾ ವಿಭಾಗಗಳು ಮತ್ತು ಕ್ಷೇತ್ರಗಳೂ ಸೇರಿದಂತೆ ಪ್ರತಿಯೊಂದನ್ನೂ ನವೀಕರಿಸುವುದು ಮತ್ತು ವಿಸ್ತರಿಸುವುದು.

# ರಾಷ್ಟ್ರೀಯ ಶಿಕ್ಷಣ ಆಯೋಗ

## 1. ಶೈಕ್ಷಣಿಕ ಪರಿವರ್ತನೆ: ರಾಷ್ಟ್ರೀಯ ಶಿಕ್ಷಣ ಆಯೋಗ

**ಉದ್ದೇಶ:** ಒಂದು ಹೊಸ ರಾಷ್ಟ್ರೀಯ ಶಿಕ್ಷಣ ಆಯೋಗದ ನೇತೃತ್ವದಲ್ಲಿ ಭಾರತದ ಶಿಕ್ಷಣ ವ್ಯವಸ್ಥೆಯ ಸಮಷ್ಟಿ ಪರಿಣಾಮದ ಕಾರ್ಯವು, ಸೂಕ್ಷ್ಮ ಕಲ್ಪನಾ ದೃಷ್ಟಿಯಿಂದ ಹಿಡಿದು ಅದರ ಅನುಷ್ಠಾನದವರೆಗೆ ಎಲ್ಲಾ ಹಂತಗಳಲ್ಲಿಯೂ ನ್ಯಾಯ ಮತ್ತು ವಿಶೇಷತೆಯನ್ನು ಒದಗಿಸುವುದಾಗಿದೆ.

ಭಾರತೀಯ ಶಿಕ್ಷಣ ವ್ಯವಸ್ಥೆಗೆ ಸ್ಫೂರ್ತಿದಾಯಕ ನಾಯಕತ್ವದ ಅಗತ್ಯವಿದ್ದು, ಅದನ್ನು ಅನುಷ್ಠಾನಗೊಳಿಸುವಿಕೆಯು ಶ್ರೇಷ್ಠತೆಯನ್ನೂ ಖಚಿತಪಡಿಸುತ್ತದೆ.

**ಎ.** ರಾಷ್ಟ್ರೀಯ ಶಿಕ್ಷಾ ಆಯೋಗ್ ಅಥವಾ ರಾಷ್ಟ್ರೀಯ ಶಿಕ್ಷಣ ಆಯೋಗವನ್ನು ಮಾನ್ಯ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ಸರ್ವೋನ್ನತ ಸಂಸ್ಥೆಯನ್ನಾಗಿ ರಚಿಸಲಾಗುವುದು.

**ಬಿ.** ಕೇಂದ್ರ ಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿ ದಿನನಿತ್ಯದ ವಿಷಯಗಳಿಗೆ ಸಂಬಂಧಿಸಿದಂತೆ ನೇರವಾದ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

**ಸಿ.** **ಆಯೋಗವು** ಪ್ರಸಿದ್ಧ ಶಿಕ್ಷಣ ತಜ್ಞರು, ಸಂಶೋಧಕರು, ಕೇಂದ್ರ ಸಚಿವರುಗಳು, ರಾಜ್ಯಗಳ ಮುಖ್ಯಮಂತ್ರಿಗಳ ಪ್ರಾತಿನಿಧ್ಯ ಮತ್ತು ವಿವಿಧ ಕ್ಷೇತ್ರಗಳ ಶ್ರೇಷ್ಠ ವೃತ್ತಿಪರರನ್ನು **ಒಳಗೊಂಡಿರುತ್ತದೆ**. ಆಯೋಗದ ಎಲ್ಲ ಸದಸ್ಯರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೆಚ್ಚಿನ ಪರಿಣತಿ ಮತ್ತು ಸಾರ್ವಜನಿಕ ಕೊಡುಗೆಗಳನ್ನು ನೀಡಿದ ದಾಖಲೆಯನ್ನು ಹೊಂದಿರುವ ವ್ಯಕ್ತಿಗಳಾಗಿರುತ್ತಾರೆ ಹಾಗೂ ಆಪಾದನೆಗೆ ಆಸ್ಪದವಿಲ್ಲದ/ಪ್ರಶ್ನಾತೀತ ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ಹೊಂದಿರುವ ಜನರಾಗಿರುತ್ತಾರೆ.

**ಡಿ.** ಆಯೋಗವು **ಭಾರತದಲ್ಲಿ ಶೈಕ್ಷಣಿಕ ಜವಾಬ್ದಾರಿಯನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತದೆ**. ಇದು ನಮ್ಮ ಸಮಾಜದ ವೈವಿಧ್ಯತೆಯನ್ನು ಪೋಷಿಸುವ ಸಂದರ್ಭದಲ್ಲಿ ಶಿಕ್ಷಣದ ಸಮಗ್ರ ರಾಷ್ಟ್ರೀಯ ದೃಷ್ಟಿಕೋನವನ್ನು ಸಾಧಿಸುವ ತನ್ನ ಸರ್ವೋತ್ಕೃಷ್ಟ ಸಾಮರ್ಥ್ಯವನ್ನು ತೋರಿಸುತ್ತದೆ. ಇದು ರಾಷ್ಟ್ರಾದ್ಯಂತ, ರಾಜ್ಯಾದ್ಯಂತ ಮತ್ತು ಸಾಂಸ್ಥಿಕ ಮಟ್ಟಗಳಲ್ಲಿ ಎಲ್ಲಾ ಸಂಬಂಧಿತ ಕಾರ್ಯಕಾರಿಗಳು ಹಾಗೂ ಮುಖಂಡರಿಂದ ಪರಿಣಾಮಕಾರಿ ಮತ್ತು ಸಮನ್ವಯಗೊಂಡ ದೃಷ್ಟಿಕೋನವನ್ನಲ್ಲದೆ ಚಟುವಟಿಕೆಯನ್ನೂ ಸುಗಮಗೊಳಿಸುತ್ತದೆ.

**ಇ.** ಆಯೋಗವು ಪರಸ್ಪರ ಅನ್ಯೋನ್ಯ ಸಂಬಂಧ ಮತ್ತು ಸಮಷ್ಟಿ ಪರಿಣಾಮವನ್ನು ಖಚಿತಪಡಿಸಿಕೊಳ್ಳಲು **ಪ್ರತಿ ರಾಜ್ಯದೊಂದಿಗೂ ನಿಕಟವಾಗಿ ಕೆಲಸ ಮಾಡುತ್ತದೆ.** ರಾಜ್ಯಗಳು ಶಿಕ್ಷಣಕ್ಕಾಗಿ ರಾಜ್ಯಮಟ್ಟದ ಸರ್ವೋನ್ನತ ಮಂಡಳಿಗಳನ್ನು ಸ್ಥಾಪಿಸಬಹುದು ಮತ್ತು ಅವುಗಳನ್ನು ರಾಜ್ಯ ಶಿಕ್ಷಾ ಆಯೋಗ್ ಅಥವಾ ರಾಜ್ಯ ಶಿಕ್ಷಣ ಆಯೋಗ (State Education Commission) ಎಂದು ಕರೆಯಬಹುದು.

# ಶಿಕ್ಷಣಕ್ಕಾಗಿ ಹಣಕಾಸು ಪೂರೈಕೆ

## 1. ಶಿಕ್ಷಣಕ್ಕಾಗಿ ಹಣಕಾಸು ಪೂರೈಕೆ

ಎ. ಶಿಕ್ಷಣದ ಪ್ರಯೋಜನೆಗಳು ಒಟ್ಟಾರೆಯಾಗಿ ಸಮಾಜಕ್ಕೆ ಸೇರುವುದರಿಂದ ಸಮಾಜದ ಭವಿಷ್ಯದ ಕಡೆಗೆ ಉತ್ತಮ ಹೂಡಿಕೆ ಇಲ್ಲ ಎಂದು ನಂಬಿರುವ ಕಾರಣ ಈ ನೀತಿಯು ಶೈಕ್ಷಣಿಕ ಹೂಡಿಕೆಯನ್ನು ಹೆಚ್ಚಿಸಲು ಬದ್ಧವಾಗಿದೆ.

ಬಿ. ಆದ್ದರಿಂದ, **10 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ಶಿಕ್ಷಣದ ಮೇಲಿನ ಸಾರ್ವಜನಿಕ ಹೂಡಿಕೆಯನ್ನು ಶೇಕಡಾ 20ಕ್ಕೆ ಹೆಚ್ಚಿಸುವ** ಉದ್ದೇಶಗಳನ್ನು ಈ ನೀತಿಯು ಹೊಂದಿದೆ.

ಸಿ. ಕಲಿಕೆಯ **ಸಂಪನ್ಮೂಲಗಳು**, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಯೋಗಕ್ಷೇಮದ ವಿಷಯಗಳು, ಪೌಷ್ಠಿಕಾಂಶದ ಬೆಂಬಲ, ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿಗಳ ನೇಮಕ, ಶಿಕ್ಷಕರ ಅಭಿವೃದ್ಧಿ ಅಲ್ಲದೆ ಸೌಲಭ್ಯವಂಚಿತ ಮತ್ತು ಹಿಂದುಳಿದ ವರ್ಗವನ್ನು ಪ್ರತಿನಿಧಿಸುವ ಗುಂಪುಗಳಿಗೆ ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಪ್ರಮುಖ ನಾಯಕರುಗಳಿಗೂ ಬೆಂಬಲ ನೀಡುವುದು ಮುಂತಾದ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಹಣಕಾಸಿನ ನೆರವು ನೀಡುವಲ್ಲಿ ಯಾವುದೇ ರೀತಿಯ ರಾಜಿ-ಸಂಧಾನ ಮಾಡಿಕೊಳ್ಳುವುದಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ **ಜನಪರ** ಚಟುವಟಿಕೆಗಳಿಗೆ ಪುನಶ್ಚೇತನ ನೀಡುವಿಕೆ, ಸಕ್ರಿಯ ಪ್ರೋತ್ಸಾಹ ಮತ್ತು ಬೆಂಬಲ ನೀಡಬೇಕೆಂದು ಈ ನೀತಿಯು ಹೇಳುತ್ತದೆ. ಯಾವುದೇ ಶೈಕ್ಷಣಿಕ ಪ್ರಯತ್ನಕ್ಕಾಗಿ ಲಾಭರಹಿತ ಆಧಾರದ ಮೇಲೆ ಎಲ್ಲಾ ಸಾರ್ವಜನಿಕ-ಒಳಿತಿಗಾಗಿ ಇರುವ ಹಣವನ್ನು ಅಸ್ತಿತ್ವದಲ್ಲಿರುವ ಸಂಸ್ಥೆಗಳ ನಿರ್ಣಾಯಕ ಅಗತ್ಯಗಳತ್ತ ಸಾಗುವಂತೆ ಮಾಡಲಾಗುತ್ತದೆ.

ಡಿ. ಮುಖ್ಯವಾಗಿ ಮೂಲಸೌಕರ್ಯ ಮತ್ತು ಸಂಪನ್ಮೂಲಗಳಿಗೆ ಸಂಬಂಧಿಸಿದ ಒಂದು ಅವಧಿಯ ಖರ್ಚಿನ ಜೊತೆಗೆ, ಈ ನೀತಿಯು ಕೆಳಗಿನ **ಪ್ರಮುಖ ಮುನ್ನುಗ್ಗುತ್ತಿರುವ ಕ್ಷೇತ್ರಗಳನ್ನು** ಗುರುತಿಸುತ್ತದೆ: (i) ಪೂರ್ವ ಪ್ರಾಥಮಿಕ ಶಿಕ್ಷಣದ ವಿಸ್ತರಣೆ ಮತ್ತು ಸುಧಾರಣೆ, (ii) ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞಾನವನ್ನು ಖಾತರಿಪಡಿಸುವುದು, (iii) ಶಾಲಾ ಸಂಕೀರ್ಣಗಳಲ್ಲಿ ಸಮರ್ಪಕವಾದ ಮತ್ತು ಸೂಕ್ತ ಸಂಪನ್ಮೂಲಗಳ ಕ್ರೋಢೀಕರಣ, (iv) ಆಹಾರ ಮತ್ತು ಪೌಷ್ಠಿಕಾಂಶ (ಬೆಳಗಿನ ಉಪಹಾರ ಮತ್ತು ಮಧ್ಯಾಹ್ನದ ಊಟ), (v) ಶಿಕ್ಷಕರ ಶಿಕ್ಷಣ ಮತ್ತು ಶಿಕ್ಷಕರ ವೃತ್ತಿಪರ ಬೆಳವಣಿಗೆ, (vi) ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಪುನರುಜ್ಜೀವನಗೊಳಿಸುವಿಕೆ ಹಾಗೂ (vii) ಸಂಶೋಧನೆ.

**ಇ.** ಹಣಕಾಸಿನ **ಬಂಡವಾಳದ** ಸುಗಮ, ಸಮಯೋಚಿತ ಮತ್ತು ಸೂಕ್ತವಾದ ಹರಿವು ಹಾಗೂ ಅವುಗಳ ಸಂಭವನೀಯ ಪ್ರಮಾಣೀಕೃತ ಬಳಕೆಗಳತ್ತ ಆಡಳಿತ ಮತ್ತು ನಿರ್ವಹಣೆಯು ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಸಕ್ರಿಯ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುವ ಪಾತ್ರಗಳನ್ನು ಸ್ಪಷ್ಟವಾಗಿ ಬೇರ್ಪಡಿಸುವುದು, ಸಂಸ್ಥೆಗಳಿಗೆ ಅಧಿಕಾರ ಮತ್ತು ಸ್ವಾಯತ್ತತೆ ನೀಡುವುದು, ನಾಯಕತ್ವವನ್ನು ಬೇಡುವ ಕ್ಷೇತ್ರಗಳಿಗೆ ಜನರನ್ನು ನೇಮಿಸುವುದು ಅಲ್ಲದೆ ಪ್ರಬುದ್ಧ ಮೇಲ್ವಿಚಾರಣೆಯ ಮೂಲಕ ಇದನ್ನು ಸಕ್ರಿಯಗೊಳಿಸಲಾಗುತ್ತದೆ.

**ಎಫ್.** 'ಹಗುರ ಆದರೆ ಬಿಗಿಯಾದ' ನಿಯಂತ್ರಣ ವಿಧಾನವೂ ಸೇರಿದಂತೆ, ಸಾರ್ವಜನಿಕ ಶಿಕ್ಷಣದಲ್ಲಿ ಗಣನೀಯ ಪ್ರಮಾಣದ ಹೂಡಿಕೆ ಮತ್ತು ಪಾರದರ್ಶಕತೆಯಿಂದ ಸಾರ್ವಜನಿಕವಾಗಿ ಬಹಿರಂಗಪಡಿಸುವಿಕೆಯೂ ಸೇರಿದಂತೆ ಉತ್ತಮ ಆಡಳಿತದ ಕಾರ್ಯವಿಧಾನಗಳನ್ನು ರೂಪಿಸುವ ಮೂಲಕ **ಶಿಕ್ಷಣದ ವ್ಯಾಪಾರೀಕರಣದ** ವಿಷಯವನ್ನು ನೀತಿಯು ಅನೇಕ ಸಂಬಂಧಿತ ರಂಗಗಳ ಮೂಲಕ ನಿರ್ವಹಿಸಿ, ಕೈಗೊಳ್ಳುತ್ತದೆ.

## 2. ಭವಿಷ್ಯದ ನಡೆ

ಸಮಯಸೂಚಿಗಳು ಮತ್ತು ಪರಿಶೀಲನೆಗಾಗಿ ಒಂದು ಯೋಜನೆಯೊಂದಿಗೆ, ಶಿಕ್ಷಣದಲ್ಲಿ ತೊಡಗಿರುವ ಎಲ್ಲ ಸಂಸ್ಥೆಗಳಲ್ಲಿಯೂ ಯೋಜನೆಯಲ್ಲಿ ಸುಸಂಬದ್ಧತೆ ಮತ್ತು ಸಮಷ್ಠಿ ಪರಿಣಾಮಗಳ ಮೂಲಕ ನೀತಿಯನ್ನು ಮತ್ತು ಅದರ ಉದ್ದೇಶಗಳನ್ನು ಕಾರ್ಯಗತಗೊಳಿಸಲಾಗಿದೆಯೆ ಎಂದು ತಿಳಿದುಕೊಳ್ಳಲು ನೀತಿಯು ವಿವಿಧ ಸಂಸ್ಥೆಗಳ ನೇತೃತ್ವದ ಪ್ರಮುಖ ಕ್ರಮಗಳನ್ನು ವಿವರಿಸುತ್ತದೆ.

ಮಾನವಕುಲದ ಪ್ರತಿಯೊಂದು ಯುಗದಲ್ಲಿಯೂ, ಜ್ಞಾನವು ಹಿಂದಿನ ಎಲ್ಲಾ ತಲೆಮಾರುಗಳಿಂದ ಸೃಷ್ಟಿಸಲ್ಪಟ್ಟಿದ್ದರಲ್ಲಿ ಒಟ್ಟು ಮೊತ್ತವನ್ನು ಪ್ರತಿನಿಧಿಸುತ್ತದೆ, ಇದಕ್ಕೆ ಪ್ರಸ್ತುತ ಪೀಳಿಗೆಯು ತನ್ನದೇ ಆದ ವಿಶೇಷತೆಯನ್ನು ಸೇರಿಸುತ್ತದೆ.

ಮೊಬಿಯಸ್‌ನ ತುಣುಕೊಂದರ ಲಕ್ಷಣಗಳು ಜ್ಞಾನದ ಶಾಶ್ವತ ಅಭಿವೃದ್ಧಿ ಮತ್ತು ನೇರ ಸ್ವರೂಪವನ್ನು ಸಂಕೇತಿಸುತ್ತದೆ – ಯಾವ ವಿಷಯವು ಆರಂಭವನ್ನು ಹೊಂದಿಲ್ಲವೋ ಅದು ಯಾವುದೇ ರೀತಿಯ ಅಂತ್ಯವನ್ನೂ ಹೊಂದಿರುವುದಿಲ್ಲ.

ಈ ನೀತಿಯು ಈ ನಿರಂತರತೆಯ ಭಾಗವಾಗಿ ಸೃಷ್ಟಿ, ಪ್ರಸರಣ, ಬಳಕೆ ಮತ್ತು ಜ್ಞಾನದ ಪ್ರಸಾರವನ್ನು ರೂಪಿಸುತ್ತದೆ.